



# 10 ವರ್ಷಗಳಲ್ಲಿ ಮೋದಿ

## ಮೈಸೂರು-ಕೊಡಗಿಗೆ ಕೊಟ್ಟಿದ್ದೇನು?

## ಪ್ರತಾಪ್ ಸಿಂಹ ತಂದಿದ್ದೇನು?



## ರಿಪೋರ್ಟ್ ಕಾರ್ಡ್

ಮೈಸೂರಿನಲ್ಲಿ 12 ಎಂಜಿನಿಯರಿಂಗ್ ಕಾಲೇಜುಗಳಿವೆ, 83 ಡಿಗ್ರಿ ಕಾಲೇಜಿವೆ, ಆದರೆ ಬಹುತೇಕ ಉದ್ಯೋಗಾವಕಾಶಗಳೇ ಇಲ್ಲ, ಕೈಗಾರಿಕೆಗಳು ಹೆಚ್ಚಾಗುತ್ತಿಲ್ಲ, ಉದ್ಯಮ ಬೆಳೆಯುತ್ತಿಲ್ಲ, ಹೊಸ ಕಂಪನಿಗಳು ಬರುತ್ತಿಲ್ಲ, ಪದವಿ ಪಡೆದವರು, ಎಂಜಿನಿಯರಿಂಗ್ ಓದಿದವರು ಉದ್ಯೋಗಕ್ಕಾಗಿ ಬೆಂಗಳೂರು ಹಾಗೂ ಇತರ ಭಾಗಗಳತ್ತ ಮುಖ ಮಾಡುವಂಥ ಪರಿಸ್ಥಿತಿ ಇದೆ. 2014, ಮೇ 16ರಂದು ನಾನು ಮೈಸೂರು-ಕೊಡಗು ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದಾಗ ಸಾಮಾನ್ಯವಾಗಿ ಕೇಳಿ ಬರುತ್ತಿದ್ದ ಮಾತು ಇದಾಗಿತ್ತು. ಆದರೆ ಮೈಸೂರು ಬೆಳೆಯಲು, ಉದ್ಯಮ ಉದ್ಧಾರವಾಗಲು, ಉದ್ಯೋಗಾವಕಾಶಗಳು ಸೃಷ್ಟಿಯಾಗಲು ಅಡಚಣೆಯಾಗಿದ್ದು ಏನು? ಮೈಸೂರಿಗೆ ಕನೆಕ್ಟಿವಿಟಿಯೇ ದೊಡ್ಡ ಕಂಟಕವಾಗಿ ಪರಿಣಮಿಸಿತ್ತು. ಹಾಗಾಗಿ ಈ 10 ವರ್ಷಗಳಲ್ಲಿ ರೋಡು, ರೈಲು, ಏರ್ ಕನೆಕ್ಟಿವಿಟಿಯನ್ನು ಅಭಿವೃದ್ಧಿಪಡಿಸಲು ನಾನು ಯಾವೆಲ್ಲಾ ಯೋಜನೆಗಳನ್ನು ತಂದು ಕಾರ್ಯಗತಗೊಳಿಸಿದ್ದೇನೆ ಹಾಗೂ ಕುಡಿಯುವ ನೀರು ಸಹಿತ ಇನ್ನು ಯಾವೆಲ್ಲಾ ಯೋಜನೆಗಳನ್ನು ತಂದಿದ್ದೇನೆ ಎಂಬುದರ ವರದಿಯನ್ನು ನಿಮ್ಮ ಮುಂದಿಟ್ಟು ವಿನಮ್ರವಾಗಿ ಮತ್ತೊಮ್ಮೆ ಆಶೀರ್ವಾದ ಕೇಳುತ್ತಿದ್ದೇನೆ.

ಧನ್ಯವಾದಗಳು

ಪ್ರತಾಪ್ ಸಿಂಹ





# 10 ಸಾವಿರ ಕೋಟಿ, 10 ಪಥದ ಹೆದ್ದಾರಿ

**1.** 2018 ಫೆಬ್ರವರಿ 19ರಂದು ಮೈಸೂರಿಗೆ ಆಗಮಿಸಿದ್ದ ಪ್ರಧಾನಿ ನರೇಂದ್ರ ಮೋದಿಯವರು ಮಹಾರಾಜ ಗ್ರೌಂಡ್‌ನಲ್ಲಿ ಮೈಸೂರು ಮತ್ತು ಬೆಂಗಳೂರು ನಡುವೆ 6 ಪಥದ ಹೆದ್ದಾರಿ, ತಲಾ ಎರಡು ಪಥಗಳಿರುವ ಸರ್ವಿಸ್ ರಸ್ತೆಗಳು ಸೇರಿದಂತೆ ಒಟ್ಟು 10 ಪಥಗಳ ರಸ್ತೆ ನಿರ್ಮಾಣದ ಘೋಷಣೆ ಮಾಡಿದರು. ಮರುದಿನವೇ 6400 ಕೋಟಿ ಪ್ರಾರಂಭಿಕ ಅಂದಾಜು ಮೊತ್ತಕ್ಕೆ ಪ್ರಧಾನಿ ಮೋದೀಜಿ ಒಪ್ಪಿಗೆ ನೀಡಿದರು. ಮಾರ್ಚ್ 24, 2018 ರಂದು ನಿತಿನ್ ಗಡ್ಕರಿಯವರು ಗುದ್ದಲಿ ಪೂಜೆ ನೆರವೇರಿಸಿದರು. ಕೋವಿಡ್ ನಡುವೆಯೂ 4 ವರ್ಷಗಳಲ್ಲಿ ಭೂಸ್ವಾಧೀನ, ರಸ್ತೆ ನಿರ್ಮಾಣ ಕಾರ್ಯ ಮುಗಿಸಿ 2023, ಮಾರ್ಚ್ 12ರಂದು ಲೋಕಾರ್ಪಣೆ ಮಾಡಿಸಿದ ಹೆಮ್ಮೆ ನನಗಿದೆ. ಅಂದಾಜು ವೆಚ್ಚ ಹೆಚ್ಚಾಗಿ 10 ಸಾವಿರ ಕೋಟಿಯಷ್ಟು ಬೃಹತ್ ಮೊತ್ತವನ್ನು ಮೋದೀಜಿ ಈ ರಸ್ತೆ ನಿರ್ಮಾಣಕ್ಕೆ ನೀಡಿದ್ದಾರೆ.

- ಭೂಸ್ವಾಧೀನ: 3539 ಕೋಟಿ
- ನಿರ್ಮಾಣ ವೆಚ್ಚ: 5090 ಕೋಟಿ
- ಹೆಚ್ಚುವರಿ ಭೂಸ್ವಾಧೀನ: 920 ಕೋಟಿ
- ಎಂಟ್ರಿ–ಎಕ್ಸಿಟ್, ಇತರ ಸೌಲಭ್ಯಗಳು: 762 ಕೋಟಿ

**ಒಟ್ಟು: 10,311 ಕೋಟಿ ರೂ.ಗಳು**






# ಸಂಸದರಿಂದ ಮೈಸೂರು–ಬೆಂಗಳೂರು ಹೆದ್ದಾರಿ ಕಾಮಗಾರಿ ವೀಕ್ಷಣೆ











## ಮೈಸೂರು–ಕುಶಾಲನಗರ 4 ಲೇನ್ ಹೈವೇಗೆ 4130 ಕೋಟಿ ರೂ.

**2.** ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ಉದ್ಘಾಟನೆಯ ದಿನವೇ ಪ್ರಧಾನಿ ನರೇಂದ್ರ ಮೋದೀಜಿ ಮೈಸೂರು–ಕುಶಾಲನಗರ ನಡುವೆ ರೂ.4130 ಕೋಟಿಗಳ ವೆಚ್ಚದ ನಾಲ್ಕು ಪಥದ ಹೆದ್ದಾರಿ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದರು. ಈ ಹೆದ್ದಾರಿಯನ್ನು 2025ರೊಳಗೆ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡಿಸುತ್ತೇನೆ ಎಂದು ವಾಗ್ದಾನ ಮಾಡುತ್ತೇನೆ.



# ರಾಷ್ಟ್ರೀಯ ಹೆದ್ದಾರಿಯಾಗಿ ಮೈಸೂರು ರಿಂಗ್ ರಸ್ತೆ

**3.** ಮೂಡಾ ವ್ಯಾಪ್ತಿಯಲ್ಲಿದ್ದ ಸುಮಾರು 41.5 ಕಿ.ಮೀ ಉದ್ದದ ಮೈಸೂರಿನ ರಿಂಗ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಉನ್ನತೀಕರಿಸಿ, ರೂ.147.7 ಕೋಟಿ ಮೊತ್ತದಡಿ ಡಾಂಬರೀಕರಣ ಮಾಡಿಸಿದ್ದೇನೆ. ಕಗ್ಗತ್ತಲಾಗಿದ್ದ ರಿಂಗ್ ರಸ್ತೆಗೆ 4528 LED ಬಲ್ಬ್, 17 ಹೈಮಾಸ್ಟ್ ಮತ್ತು 18 ಮಿನಿ ಮಾಸ್ಟ್ ಲೈಟ್ ಅಳವಡಿಸುವ ಜತೆಗೆ ರಸ್ತೆಯುದ್ದಕ್ಕೂ ಇರುವ 10 ಅಡಿ ಮೀಡಿಯನ್ ನಲ್ಲಿ 6 ಸಾವಿರ ಹೆಬ್ಬೇವು ಮರಗಳನ್ನು ಸರ್ವೀಸ್ ರಸ್ತೆಯ ಇಕ್ಕೆಲಗಳಲ್ಲಿ 8 ಸಾವಿರ ಹಣ್ಣು ಬಿಡುವ ಮರಗಳನ್ನು ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಬೆಳೆಸಿ ಪಾಲನೆಯನ್ನು ಮಾಡಲಾಗುತ್ತಿದೆ.





# ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನೆಯಡಿ ಕೊಡಗಿನಲ್ಲಿ 84 ಕಿ.ಮೀ ಮತ್ತು ಮೈಸೂರಿನಲ್ಲಿ 128 ಕಿ.ಮೀ ರಸ್ತೆ ನಿರ್ಮಾಣ

4. ಗ್ರಾಮ ಸಡಕ್ ಯೋಜನೆಯಡಿ ಕೊಡಗು ಜಿಲ್ಲೆಯಲ್ಲಿ ರೂ.70 ಕೋಟಿ ವೆಚ್ಚದಲ್ಲಿ 83.83 ಕಿ.ಮೀ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ.

5. ಮೈಸೂರು ಜಿಲ್ಲೆಯಲ್ಲಿ (ಮೈಸೂರು ತಾಲ್ಲೂಕು, ಹುಣಸೂರು ಹಾಗೂ ಪಿರಿಯಾಪಟ್ಟಣ) ರೂ.96 ಕೋಟಿ ವೆಚ್ಚದಲ್ಲಿ 128.56 ಕಿ.ಮೀ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ.




6. ಮಡಿಕೇರಿಯಿಂದ ಸಂಪಾಜೆವರೆಗೂ ರೂ.58 ಕೋಟಿ ವೆಚ್ಚದಲ್ಲಿ 19 ರಿಟೈನಿಂಗ್ ವಾಲ್ ನಿರ್ಮಾಣ ಮಾಡಿ ರೂ.19.40 ಕೋಟಿ ವೆಚ್ಚದಲ್ಲಿ 21 ಕಿಮೀ ರಸ್ತೆ ಡಾಂಬರೀಕರಣ ನಡೆಯುತ್ತಿದೆ.

7. 28 ಹೆಚ್ಚುವರಿ ರೀಟೈನಿಂಗ್ ವಾಲ್ ನಿರ್ಮಾಣಕ್ಕೆ ರೂ.100 ಕೋಟಿ ಅನುದಾನ ತಂದಿದ್ದೇನೆ.







# ರಾಷ್ಟ್ರೀಯ ಹೆದ್ದಾರಿ–766 ಮತ್ತು 212ರ ಡಾಂಬರೀಕರಣ


**8.** ಕೊಳ್ಳೇಗಾಲದಿಂದ ಟಿ.ನರಸೀಪುರ, ನಂಜನಗೂಡು, ಗುಂಡ್ಲುಪೇಟೆ ಮಾರ್ಗವಾಗಿ ಕರ್ನಾಟಕ ಗಡಿಯವರೆಗೆ ಸುಮಾರು 131 ಕಿ.ಮೀ ರಸ್ತೆ ನವೀಕರಣವನ್ನು ರೂ.127 ಕೋಟಿಗಳ ಅನುದಾನದಡಿ ಡಾಂಬರೀಕರಣ ಮಾಡಲಾಗುತ್ತಿದೆ.






# ಹುಣಸೂರು ಬೈಪಾಸ್ ಇನ್ನು ಮುಂದೆ 4 ಲೇನ್ ಹೈವೆ

**9.** ದೇವರಾಜ್ ಅರಸ್ ಪ್ರತಿಮೆಯಿಂದ ಆರಂಭವಾಗುವ ಹುಣಸೂರು ಬೈಪಾಸ್ ವಾಹನ ದಟ್ಟಣೆಯಿಂದ ಗೊಂದಲದ ಗೂಡಾಗಿದ್ದು ಅದನ್ನು 4 ಲೇನ್ ಮಾಡಲು ಹಾಗೂ ಲಕ್ಷ್ಮಣತೀರ್ಥ ನದಿಗೆ ಕಟ್ಟಲಾಗಿರುವ ಸೇತುವೆ ಶಿಥಿಲಗೊಂಡಿರುವುದರಿಂದ ಹೊಸ ಸೇತುವೆ ನಿರ್ಮಾಣ ಮಾಡಲು 86 ಕೋಟಿ ರೂ. ತಂದಿದ್ದೇನೆ.




| STRUCTURE | A1 | P1 | P2 | P3 | A2 |
|---|---|---|---|---|---|
| FRL (m) | 785.175 | 785.175 | 785.175 | 785.175 | 785.175 |
| CAP TOP RL (m) | 782.735 | 782.735 | 782.735 | 782.735 | 782.735 |
| PILE CAP TOP RL | 782.735 | – | | – | 782.735 |
| NALA BL (m) | 780.738 | 775.525 | 775.706 | 775.232 | 781.811 |
| FL/PTL (m) | 770.538 | 771.025 | | 770.732 | 770.811 |
| CHAINAGE (m) | 173+536 | 173+561 | 173+586 | 173+611 | 173+636 |

ELEVATION



10. ಮೈಸೂರು ರಿಂಗ್ ರಸ್ತೆಯಲ್ಲಿರುವ 4 RUB (Road Under Bridge) ಗಳ ನಿರ್ಮಾಣ ರೂ.76.09 ಕೋಟಿಗಳ ಅನುದಾನದಡಿ ಕಾಮಗಾರಿ ನಡೆಯುತ್ತಿದೆ.

- ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕು ತಾತನಹಳ್ಳಿ ಅಪಘಾತ ವಲಯ ಸುಧಾರಣೆಗಾಗಿ ರೂ.1.93 ಕೋಟಿಗಳ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿ ಮುಗಿದಿದೆ.
- ಕೇಂದ್ರ ರಸ್ತೆ ನಿಧಿಯಿಂದ (ಸಿ.ಆರ್.ಎಫ್) ಮೈಸೂರು ನಗರ, ಚಾಮುಂಡೇಶ್ವರಿ, ಹುಣಸೂರು, ಪಿರಿಯಾಪಟ್ಟಣದ ರಸ್ತೆ ಅಭಿವೃದ್ಧಿಗಾಗಿ ರೂ.202 ಕೋಟಿ ಅನುದಾನ.





11. ಮೈಸೂರು ನಗರದ ಹೂಟಗಳ್ಳಿಯಿಂದ ದಕ್ಷಾ ಪಿ.ಯು. ಕಾಲೇಜುವರೆಗೆ ಸುಮಾರು 4.82 ಕಿ.ಮೀ ವಲಯ ಸುಧಾರಣೆಗಾಗಿ 34.50 ಕೋಟಿ ರೂ.ಗಳ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದೆ.

12. ಸಿ.ಆರ್.ಎಫ್‌ನಿಂದ ಕೊಡಗಿಗೆ ರೂ.34 ಕೋಟಿ: ಗೋಣಿಕೊಪ್ಪ ನಗರದ ಪ್ರಮುಖ ರಸ್ತೆ ಹಾಗೂ ಸೋಮವಾರಪೇಟೆ ತಾಲ್ಲೂಕಿನ ಹಿಪ್ಲಿಗೇಟ್ ನಿಂದ ಆಲೂರು-ಸಿದ್ದಾಪುರವರೆಗಿನ 9.5 ಕಿ.ಮೀ ರಸ್ತೆಗೆ ಕೇಂದ್ರ ರಸ್ತೆ ನಿಧಿಯ (ಸಿ.ಆರ್.ಎಫ್) ರೂ.9 ಕೋಟಿಯಲ್ಲಿ ಕಾಮಗಾರಿ ಮುಗಿದಿದೆ.

## ಚನ್ನರಾಯಪಟ್ಟಣದಿಂದ ಮಾಕುಟ್ಟದವರೆಗೂ ಹೊಸ ಹೆದ್ದಾರಿ

13. ಚನ್ನರಾಯಪಟ್ಟಣದಿಂದ ಸೋಮವಾರಪೇಟೆ, ಮಡಿಕೇರಿ, ವಿರಾಜಪೇಟೆ ಮೂಲಕ ಮಾಕುಟ್ಟದವರೆಗೂ, ಅಂದರೆ ಕೇರಳ ಗಡಿಯವರೆಗೂ ಸಾಗುವ ರಸ್ತೆಯನ್ನು ಹೈವೇಯಾಗಿ ಅಭಿವೃದ್ಧಿಪಡಿಸಲು ಕೇಂದ್ರ ಸಚಿವ ನಿತಿನ್ ಗಡ್ಕರಿಯವರು ಒಪ್ಪಿಗೆ ನೀಡಿದ್ದು, ಸದ್ಯದಲ್ಲೇ ರಾಷ್ಟ್ರೀಯ ಹೆದ್ದಾರಿ ಸಂಖ್ಯೆಯನ್ನು ನೀಡಿ ಕಾಮಗಾರಿಯನ್ನು ಆರಂಭಿಸಲಾಗುವುದು.





## 14. ಮೈಸೂರು–ನಂಜನಗೂಡು ರಸ್ತೆಯನ್ನು 6 ಪಥದ ಹೆದ್ದಾರಿ ಮಾಡಲು ನಿತಿನ್ ಗಡ್ಕರಿಯವರಿಂದ ಆದೇಶ.



नितिन गडकरी
NITIN GADKARI

मंत्री
सड़क परिवहन एवं राजमार्ग
भारत सरकार
Minister
Road Transport and Highways
Government of India
25th February, 2023
Ref. No. KA006901

Dear Shri Prathap Simha Ji,

Please refer to your D.O. letter dated 15.03.2022 requesting for development of Mysuru - Nanjanagudu section of NH-212 in Karnataka from 4-lane to 6-lane configuration.


2. I have got the matter examined and would like to inform that NHAI has initiated the process for engagement of DPR consultant for carrying out the feasibility/DPR of the proposed section and based on the outcome of the feasibility/DPR study, action for upgradation of the said section would be considered.

With regards,


Yours sincerely,

(Nitin Gadkari)

## 15. ಮೈಸೂರು ವಿವಿ ಕ್ರಾಫರ್ಡ್ ಬಳಿ ರೈಲ್ವೆ ಅಂಡರ್ ಪಾಸ್ ನಿರ್ಮಾಣಕ್ಕೆ (LC-1) ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ರೂ.45.35 ಕೋಟಿ ಬಿಡುಗಡೆ.




## 16. ‘ರಾಯಲ್ ಇನ್’ ಹೋಟೆಲ್ ಬಳಿ KRS ರಸ್ತೆಗೆ ಮತ್ತು ರೈಲ್ವೆ ಹಳಿ ದಾಟಲು ಫ್ಲೈಓವರ್ ನಿರ್ಮಾಣಕ್ಕೆ (LC–5) ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ರೂ.62.30 ಕೋಟಿ ಬಿಡುಗಡೆ.



# ಮೈಸೂರು ರೈಲ್ವೆ ನಿಲ್ದಾಣ ಅಭಿವೃದ್ಧಿಗೆ 356 ಕೋಟಿ ರೂ.

**17.** ಮೈಸೂರು ಕೇಂದ್ರ ರೈಲ್ವೆ ನಿಲ್ದಾಣವನ್ನು 356 ಕೋಟಿ ರೂ. ವೆಚ್ಚದಲ್ಲಿ ನವೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು 2022 ಜೂನ್ 20ರಂದು ಮೋದೀಜಿ ಶಂಕುಸ್ಥಾಪನೆ ಮಾಡಿದ್ದಾರೆ. ಇದರಲ್ಲಿ ಒಟ್ಟು 12 ಸ್ಟೇಬ್ಲಿಂಗ್ ಲೇನ್, ಪಿಟ್ ಲೇನ್ ಮತ್ತು ಹೊಸ ಪ್ಲಾಟ್ ಫಾರಂಗಳಿರಲಿವೆ.




# 37.5 ಕೋಟಿಯಲ್ಲಿ ಅಶೋಕಪುರಂ ರೈಲ್ವೆ ಸ್ಟೇಶನ್ ಅಭಿವೃದ್ಧಿ

**18.** ಮೈಸೂರು ನಗರದ ಆಶೋಕಪುರಂ ರೈಲ್ವೆ ಯಾರ್ಡ್ ಅನ್ನು 37.5 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗಿದ್ದು, ಇದರಲ್ಲಿ ಒಂದು ಸುಸಜ್ಜಿತವಾದ ಸ್ಟೇಷನ್, ಫುಟ್ ಓವರ್ ಬ್ರಿಡ್ಜ್, 03 ಪ್ಲಾಟ್ ಫಾರಂ, 02 ಸ್ಟೇಬಲಿಂಗ್ ಲೈನ್ ಹಾಗೂ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.



# 10 ವರ್ಷಗಳಲ್ಲಿ ಮೈಸೂರಿಗೆ 11 ಟ್ರೈನ್‌ಗಳನ್ನು ತಂದಿದ್ದೇನೆ

1. ಮೈಸೂರು–ವಾರಣಸಿ ಟ್ರೈನ್ (ಬೈ ವೀಕ್ಲಿ)
   **ದಿನಾಂಕ: 25–12–2014**

2. ಮೈಸೂರು– ಹುಬ್ಬಳ್ಳಿ–ಬೆಳಗಾವಿ
   'ವಿಶ್ವಮಾನವ ಎಕ್ಸ್‌ಪ್ರೆಸ್' [ಡೈಲಿ]
   **ದಿನಾಂಕ: 23–05–2017**

3. ಮೈಸೂರು–ಉದಯ್‌ಪುರ್
   'ಹಮ್‌ಸಫರ್ ಎಕ್ಸ್‌ಪ್ರೆಸ್'
   **ದಿನಾಂಕ: 19–02–2018**








**4. ಬೆಂಗಳೂರು (ರಾಮನಗರ)–ಮೈಸೂರು**
**'ಮೆಮು ಟ್ರೈನ್' [ಡೈಲಿ]**
**ದಿನಾಂಕ: 23–12–2018**




**5. ಚೆನ್ನೈ–ಬೆಂಗಳೂರು–ಮೈಸೂರು**
**'ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್' [ಡೈಲಿ]**
**ದಿನಾಂಕ: 15–01–2019**




**6. ಮೈಸೂರು–ಕಾಚಿಗುಡ**
**(ಹೈದರಾಬಾದ್) [ಡೈಲಿ ಎಕ್ಸ್‌ಪ್ರೆಸ್]**
**ದಿನಾಂಕ: 05–03–2019**




**7. ಮೈಸೂರು–ಬೆಂಗಳೂರು**
**'ಮೆಮು ಟ್ರೈನ್' [ಡೈಲಿ]**
**ದಿನಾಂಕ: 27–07–2019**



8. ಮೈಸೂರು–ಕೋಚುವೇಲಿ (ತ್ರಿವೇಂಡ್ರಮ್) [ಡೈಲಿ ಎಕ್ಸ್‌ಪ್ರೆಸ್] **ದಿನಾಂಕ: 29–09–2019**




9. ಮೈಸೂರು–ಬೆಂಗಳೂರು 'ಮೆಮು ಟ್ರೈನ್' [ಡೈಲಿ] **ದಿನಾಂಕ: 16–12–2019**




10. ಬೆಂಗಳೂರು–ಮೈಸೂರು–ಮಂಗಳೂರು **ದಿನಾಂಕ: 25–08–2022**




11. ವಂದೇ ಭಾರತ್– ಮೈಸೂರು–ಚೆನ್ನೈ **ದಿನಾಂಕ: 11–11–2022**




---

**ರೂ.70 ಕೋಟಿಯಲ್ಲಿ ನಾಗನಹಳ್ಳಿ ಮೆಮು ಶೆಡ್ ನಿರ್ಮಾಣ ಮಾಡಲು ಭೂಸ್ವಾಧೀನ ಕಾರ್ಯ ಪ್ರಗತಿಯಲ್ಲಿದೆ.**



**19.** ಸುಮಾರು 9.8 ಕೋಟಿ ರೂ. ವೆಚ್ಚದಲ್ಲಿ ಮೈಸೂರು ರೈಲ್ವೆ ಮ್ಯೂಸಿಯಂ ವಿಸ್ತರಣೆ ಹಾಗೂ ಅಭಿವೃದ್ಧಿಪಡಿಸಲಾಗಿರುತ್ತದೆ.

**20.** ಸುಮಾರು 16.5 ಕೋಟಿ ರೂ. ವೆಚ್ಚದಲ್ಲಿ ಮೈಸೂರು ರೈಲ್ವೆ ನಿಲ್ದಾಣದ ಆಧುನೀಕರಣ (ಸುಸಜ್ಜಿತ ಪಾರ್ಕಿಂಗ್ ವ್ಯವಸ್ಥೆ, ಹವಾ ನಿಯಂತ್ರಿತ ವಿಶ್ರಾಂತಿ ಕೊಠಡಿ, ಪ್ಲಾಟ್‌ಫಾರಂಗಳಿಗೆ ಸಂಪೂರ್ಣ ಮೇಲ್ಛಾವಣಿ ನಿರ್ಮಾಣ, ವೆಯ್ಟಿಂಗ್ ಹಾಲ್, ಲೌಂಜ್ ಮತ್ತು ಆಗಸದೆತ್ತರದ ತ್ರಿವರ್ಣ ಧ್ವಜ ಸ್ತಂಭ ನಿರ್ಮಾಣ).






# ಕಡಕೋಳ ಬಳಿ 55 ಎಕರೆ ಜಾಗದಲ್ಲಿ 102 ಕೋಟಿ ರೂ. ವೆಚ್ಚದ ಗೂಡ್ಸ್ ಟರ್ಮಿನಲ್ (ICD)


**21.** ಮೈಸೂರು ಜಿಲ್ಲೆಯಲ್ಲಿ ಕೂರ್ಗಳ್ಳಿ ಮತ್ತು ಕಡಕೋಳ ಬಳಿ ಎರಡು ಪ್ರಮುಖ ಕೈಗಾರಿಕಾ ವಲಯಗಳಿದ್ದು ದೊಡ್ಡ ಪ್ರಮಾಣದ ಸರಕು ಸಾಗಣೆಗೂ ಒಂದು ಗೂಡ್ಸ್ ಟರ್ಮಿನಲ್‌ನ ಅಗತ್ಯವಿದೆ ಎಂಬುದನ್ನು ಮನಗಂಡು ಕಡಕೋಳ ಬಳಿ 55 ಎಕರೆ ಜಾಗದಲ್ಲಿ ಕಂಟೈನರ್ ಕಾರ್ಪೋರೇಶನ್ ಆಫ್ ಇಂಡಿಯಾದ ವತಿಯಿಂದ ರೂ.102 ಕೋಟಿ ರೂ. ವೆಚ್ಚದಲ್ಲಿ ರೈಲ್ವೆ ಗೂಡ್ಸ್ ಟರ್ಮಿನಲ್ ನಿರ್ಮಾಣ.



# ಕೊಡಗಿಗೆ 3097 ಕೋಟಿ ರೂ. ವೆಚ್ಚದ ರೈಲು ಯೋಜನೆ ಅಂತಿಮ

**22.** ನಮ್ಮ ರಾಜ್ಯದ 30 ಜಿಲ್ಲೆಗಳಲ್ಲಿ ರೈಲು ಸಂಪರ್ಕವಿಲ್ಲದ ಏಕಮಾತ್ರ ಜಿಲ್ಲೆ ಕೊಡಗು ಎಂಬ ಕೊರಗನ್ನು ದೂರಮಾಡುವ ನಿಟ್ಟಿನಲ್ಲಿ ಕುಶಾಲನಗರದವರೆಗೂ ಮಾತ್ರ ರೈಲು ಸಂಪರ್ಕ ಕಲ್ಪಿಸುವ 3097 ಕೋಟಿ ರೂ. ವೆಚ್ಚದ ಯೋಜನೆಗೆ ಕೇಂದ್ರದ ಅನುಮೋದನೆ ದೊರಕಿದ್ದು, ಡಿ.ಪಿ.ಆರ್. ಸಿದ್ಧಪಡಿಸಲಾಗಿದ್ದು, ರಾಜ್ಯ ಸರ್ಕಾರದ ಸಹಕಾರ ದೊರೆತು ಉಚಿತವಾಗಿ ಭೂಮಿಯನ್ನು ಸ್ವಾಧೀನ ಮಾಡಿಕೊಟ್ಟರೆ ಯೋಜನೆ ಕಾರ್ಯಗತವಾಗಲಿದೆ.



CC NO.171/2022

भारत सरकार GOVERNMENT OF INDIA
रेल मंत्रालय MINISTRY OF RAILWAYS
रेलवे बोर्ड (RAILWAY BOARD)

FAX/POST COPY
ISSUED ON : 07.10.2022

| THE GENERAL MANAGER (OPTG) | COPY TO: CPTM |
|---|---|
| SOUTH WESTERN RAILWAY,HUBBALI | SOUTH WESTERN RAILWAY, HUBBALI |

NO.2022/CHG/36/1 PT(1) (.) MINISTRY OF RAILWAYS DESIRES THAT THE FOLLOWING TRAINS BE NAMED / RENAMED AS UNDER:-

| SL. | TRAIN NUMBER & NAME | RENAMED AS |
|---|---|---|
| 1. | 12613/12614 MYSURU-BENGALURU TIPPU EXPRESS | WODEYAR EXPRESS |
| 2. | 16221/16222 TALGUPPA-MYSURU EXPRESS | KUVEMPU EXPRESS |

ENSURE COMPLIANCE AND ACTION ACCORDINGLY (.) MATTER MOST URGENT (.)

KUMAR/RAILWAYS (.)

07.10.22
(RAJESH KUMAR)
DY. DIRECTOR/CHG-I
RAILWAY BOARD

COPY TO:

1. EDPM, DD/PUNCTUALITY IN BOARD'S OFFICE
2. CMD/IRCTC, NEW DELHI

**23.** ಟಿಪ್ಪು ಎಕ್ಸ್‌ಪ್ರೆಸ್ ಬದಲು 'ಒಡೆಯರ್ ಎಕ್ಸ್‌ಪ್ರೆಸ್' ಎಂದು ಮರುನಾಮಕರಣ.

**24.** ಮೈಸೂರು–ತಾಳಗುಪ್ಪ ರೈಲನ್ನು 'ಕುವೆಂಪು ಎಕ್ಸ್‌ಪ್ರೆಸ್' ಎಂದು ನಾಮಕರಣ.









# ಮೈಸೂರು ವಿಮಾನ ನಿಲ್ದಾಣಕ್ಕೆ ಫ್ಲೈಟನ್ನೂ ತಂದಿದ್ದೇನೆ ರನ್ ವೇ ವಿಸ್ತರಣೆಗೆ 319 ಕೋಟಿಯನ್ನೂ ತಂದಿದ್ದೇನೆ

**25.** ಮೈಸೂರು ವಿಮಾನ ನಿಲ್ದಾಣದ ಉನ್ನತೀಕರಣ ಹಾಗೂ ರನ್ ವೇ ವಿಸ್ತರಣೆಗಾಗಿ ಅಗತ್ಯವಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಬಸವರಾಜ ಬೊಮ್ಮಾಯಿಯವರ ಸರ್ಕಾರದಿಂದ 319 ಕೋಟಿ ರೂ.ಗಳನ್ನು ಮಂಜೂರು ಮಾಡಿಸಿದ್ದೇನೆ ಮತ್ತು ಭೂಸ್ವಾಧೀನ ವೇಗವಾಗಿ ನಡೆಯುತ್ತಿದೆ. ಮುಂದಿನ 3 ವರ್ಷಗಳಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಅಭಿವೃದ್ಧಿಪಡಿಸುತ್ತೇನೆ.










**26.** ಮೈಸೂರು ವಿಮಾನ ನಿಲ್ದಾಣಕ್ಕೆ ಬಸವರಾಜ ಬೊಮ್ಮಾಯಿಯವರ ಸರ್ಕಾರದಿಂದ 'ನಾಲ್ವಡಿ ಕೃಷ್ಣರಾಜ ಒಡೆಯರ್ ವಿಮಾನ ನಿಲ್ದಾಣ' ಎಂದು ಹೆಸರಿಡುವ ಕ್ಯಾಬಿನೆಟ್ ನಿರ್ಧಾರವನ್ನು 2022 ರಲ್ಲಿ ಮಾಡಲಾಗಿದೆ.



BASAVARAJ BOMMAI
CHIEF MINISTER

Date 16 08 2022

DO Letter No IDD 51 DIA 2019-A

Dear Sir,

Sub: Renaming of Mysuru Airport as "Sri Nalwadi Krishnaraja Wodeyar Airport"

1. With a vision to build a sustainable and futuristic Karnataka, Civil Aviation has been identified as an emerging sector with immense opportunities in Karnataka. To attract investments, create proportionate employment opportunities, and develop enabling ecosystems for the start-ups / businesses across all sectors, Government of Karnataka has taken major steps to make the State a vibrant aviation hub and set the tone for aviation-led growth to boost the economy of Karnataka.

2. It is a matter of honour that in the year of Azadi Ka Amrut Mahotsava, the State Cabinet in its meeting held on 22.07.2022 has approved the proposal (Subject No.C 330/2022) to recommend to the Ministry of Civil Aviation to rename Mysuru Airport as "Sri Nalwadi Krishnaraja Wodeyar Airport".

3. It has been noted that Sri Nalwadi Krishnaraja Wodeyar was 24th Maharaja of Mysuru dynasty. His reign from 1902 to 1940 was known as Golden Era of Mysuru. Sri Nalwadi Krishnaraja Wodeyar has contributed a lot to the growth in the fields of administrative reforms, rural development, public health, public education, agriculture, irrigation, industry, infrastructure, railways etc.

4. In addition to this, I am pleased to share with you that Karnataka State Government is also taking up the expansion of the Runway of Mysuru Airport in collaboration with the Airports Authority of India (AAI) as per the Agreement between Airports Authority of India (AAI) and the State Government on 06.10.2005 for development of Mysuru Airport.



-2-

5. I am pleased to mention that with the implementation of RCS-UDAN scheme and improved air connectivity, the cultural heritage city of Mysuru is witnessing a surge in passenger movement. The passenger movement has increased by 7 folds and the city is also now attracting new industries and establishment of IT companies and various automotive ventures. This will further boost the increase in both passenger as well as cargo traffic in the future.


6. Summing up, I request the Government of India for necessary approvals and issuance of notification renaming Mysuru Airport as "Sri Nalwadi Krishnaraja Wodeyar Airport" at the earliest to pay rich tribute to the phenomenal contributions of Sri Nalwadi Krishnaraja Wodeyar, the then Maharaja of Mysuru.

Best regards,

Yours sincerely,
(Basavaraj Bommai)

Sri Jyotiraditya M Scindia,
Hon'ble Minister of Civil Aviation,
Government of India,
"Rajiv Gandhi Bhavan"
Safdarjung Airport,
New Delhi – 110 003.

720



ಪ್ರತಾಪ್ ಸಿಂಹ
PRATHAP SIMHA
MEMBER OF PARLIAMENT




ಪ್ರತಾಪ್ ಸಿಂಹ
PRATHAP SIMHA
MEMBER OF PARLIAMENT

# ಮುಂದಿನ 2 ವರ್ಷಗಳಲ್ಲಿ ಮೈಸೂರು, ಕೊಡಗಿನ ಪ್ರತಿ ಮನೆಗೂ ನಲ್ಲಿ ನೀರು!

**27.** ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಮೈಸೂರಿನ ಉಸ್ತುವಾರಿ ಸಚಿವರಾಗಿದ್ದ ಜಿ.ಟಿ. ದೇವೇಗೌಡರು 350 ಕೋಟಿ ರೂ. ವೆಚ್ಚದ ಹಳೇಉಂಡವಾಡಿ ಕುಡಿಯುವ ನೀರಿನ ಯೋಜನೆ ತಂದಿದ್ದಾರೆ. ಅದಕ್ಕೆ ಬಸವರಾಜ ಬೊಮ್ಮಾಯಿ ಸರ್ಕಾರದಿಂದ 250 ಕೋಟಿ ರೂ. ಹೆಚ್ಚುವರಿ ಅನುದಾನ ಕೊಡಿಸಿ ಜಿಟಿಡಿ ಮತ್ತು ಎಸ್ಟಿ ಸೋಮಶೇಖರ್ ಸರ್ ಸಹಾಯದಿಂದ ಚಾಮುಂಡೇಶ್ವರಿಯ 90 ಗ್ರಾಮಗಳಿಗೆ ಮತ್ತು ಮೈಸೂರು ನಗರಕ್ಕೆ 150 MLD ನೀರು ತಂದು ಶಾಶ್ವತವಾಗಿ ಮೈಸೂರು ನಗರ ಮತ್ತು ಚಾಮುಂಡೇಶ್ವರಿ ಕ್ಷೇತ್ರಕ್ಕೆ ನೀರು ಕೊಡಿಸುತ್ತಿದ್ದೇವೆ.







# 213 ಕೋಟಿಯಲ್ಲಿ ಹುಣಸೂರಿನ ಎಲ್ಲಾ ಮನೆಗಳಿಗೂ ಕಾವೇರಿ ನೀರು

**28.** ಜಿಟಿ ದೇವೇಗೌಡರ ಕನಸಿನ ಹಳೇಉಂಡವಾಡಿ ಯೋಜನೆಯಿಂದ ಹುಣಸೂರು ತಾಲ್ಲೂಕಿನ 164 ಗ್ರಾಮದ 277 ಜನವಸತಿ ಪ್ರದೇಶಗಳಿಗೆ ಪ್ರಧಾನಿ ನರೇಂದ್ರ ಮೋದಿಜಿಯವರ ಜಲಜೀವನ್ ಮಿಷನ್ ಯೋಜನೆಯಡಿ ಇನ್ನು 1 ವರ್ಷದಲ್ಲಿ ಕಾವೇರಿ ನೀರನ್ನು ಕೊಡಿಸುತ್ತೇವೆ. ಇದಕ್ಕಾಗಿ ಮೋದೀಜಿ ಸರ್ಕಾರ 213.00 ಕೋಟಿ ರೂ. ನೀಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಎರಡು ಬಾರಿ ನನಗೆ ಆಶೀರ್ವಾದ ಮಾಡಿರುವ ಹುಣಸೂರಿನಲ್ಲಿ ಒಟ್ಟು 184 ಹಳ್ಳಿಗಳಿದ್ದು (Villages), ಒಟ್ಟಾರೆಯಾಗಿ 310 ಜನವಸತಿ (Habitations) ಗಳಿರುತ್ತವೆ. ಇವುಗಳಿಗೆ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಪ್ರತಿ ಮನೆಗೂ ನಲ್ಲಿ ನೀರು ಸಂಪರ್ಕ ಅಳವಡಿಸಲು ಕ್ರಮ ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.





# ಪಿರಿಯಾಪಟ್ಟಣದ 303 ಗ್ರಾಮಗಳಿಗೆ 239 ಕೋಟಿ ರೂ. ವೆಚ್ಚದ ಜಲಜೀವನ್ ಮಿಷನ್ (JMM)

**29.** ನಾನು ಪ್ರತಿನಿಧಿಸುವ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ ಹಾಗೂ ಇತರೆ 303 ಗ್ರಾಮಗಳಿಗೆ ಹಾಡ್ಯ ಬಳಿ ಕಾವೇರಿಯಿಂದ ಕುಡಿಯುವ ನೀರು ಪೂರೈಸುವ 239 ಕೋಟಿ ರೂ. ವೆಚ್ಚದ ಯೋಜನೆಯನ್ನು ಮಾಜಿ ಶಾಸಕ ಕೆ. ಮಹಾದೇವಣ್ಣನ ಜತೆ ಸೇರಿ ತಂದಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.



# ಜಲಜೀವನ್ ಮಿಷನ್ ನಡಿ ಕೊಡಗಿಗೆ 121 ಕೋಟಿ ರೂ. (JMM)

**30.** ಕೊಡಗು ಜಿಲ್ಲೆಯ 463 ಜನವಸತಿ ಕೇಂದ್ರಗಳಿಗೆ ಜಲಜೀವನ್ ಮಿಷನ್ ಯೋಜನೆಯಡಿ 121.20 ಕೋಟಿ ರೂ.ಗಳ ಅನುದಾನದಡಿ ಕುಡಿಯುವ ನೀರು ಪೂರೈಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಅದರೆ ಸೂಕ್ತ ನೀರಿನ ಮೂಲದ ಸಮಸ್ಯೆಯಿದ್ದು, ಕಾವೇರಿ, ಹಾರಂಗಿಯಿಂದಲೇ ಎಲ್ಲಾ ಗ್ರಾಮಗಳಿಗೂ ನೀರು ನೀಡುವ ಯೋಜನೆಯನ್ನು ಕೈಗೆತ್ತಿಕೊಂಡು ಕೊಡಗಿನ ಜನರ ಋಣ ತೀರಿಸಲು ಮತ್ತೊಂದು ಸೇವಾ ಅವಕಾಶ ಕೇಳುತ್ತೇನೆ.






# ‘ಅಮೃತ್’ನಿಂದ ಮಡಿಕೇರಿ, ವೀರಾಜಪೇಟೆ, ಕುಶಾಲನಗರ, ಸೋಮವಾರಪೇಟೆಗೆ ಕುಡಿಯುವ ನೀರು ಕೊಡಲು 145 ಕೋಟಿ ರೂ.

**31.** ಜಲಜೀವನ್ ಮಿಷನ್ ನಡಿ ಗ್ರಾಮಗಳಿಗೆ ಕುಡಿಯುವ ನೀರು ಕೊಡುವ ಯೋಜನೆ ಜೊತೆಗೆ ಪ್ರತಿ ನಗರಗಳಿಗೂ ಕುಡಿಯುವ ನೀರು ಕೊಡಿಸುವ ಸಲುವಾಗಿ ಅಮೃತ್ ಯೋಜನೆಯಿಂದ ಜಿ.ಟಿ. ದೇವೇಗೌಡರು, ಕೆ.ಜಿ. ಬೋಪಯ್ಯ, ಅಪ್ಪಚ್ಚುರಂಜನ್ ಮತ್ತು ಕೆ. ಮಹಾದೇವ್ ಅವರ ಸಹಕಾರದಿಂದ ಅಪಾರ ಅನುದಾನ ತಂದಿದ್ದೇವೆ.

1. ಮಡಿಕೇರಿ ನಗರಕ್ಕೆ ಕುಡಿಯುವ ನೀರು ಕೊಡಲು ಅಮೃತ್ ಯೋಜನೆಯಿಂದ: ರೂ.20 ಕೋಟಿ ರೂ.
2. ವಿರಾಜಪೇಟೆ ನಗರಕ್ಕೆ: ರೂ.58.38 ಕೋಟಿ ರೂ.
3. ಕುಶಾಲನಗರಕೆ: ರೂ.40.03 ಕೋಟಿ ರೂ.
4. ಸೋಮವಾರಪೇಟೆಗೆ: ರೂ.15.26 ಕೋಟಿ ರೂ.
5. ಪಿರಿಯಾಪಟ್ಟಣ ನಗರಕ್ಕೆ: ರೂ.64.70 ಕೋಟಿ ರೂ.

## ‘ಅಮೃತ್’ನಿಂದ ಮೈಸೂರಿಗೆ 361 ಕೋಟಿ ರೂ. ಬಿಡುಗಡೆ



1. ಹುಣಸೂರು ನಗರಕ್ಕೆ: ರೂ.29.80 ಕೋಟಿ ರೂ.
2. ಹೂಟಗಳ್ಳಿ ನಗರಸಭೆಗೆ: ರೂ.62.62 ಕೋಟಿ ರೂ.
3. ಭೋಗಾದಿ ಪಟ್ಟಣ ಪಂಚಾಯಿತಿಗೆ: ರೂ.67.39 ಕೋಟಿ ರೂ.
4. ಶ್ರೀರಾಮಪುರ ಪಟ್ಟಣ ಪಂಚಾಯಿತಿಗೆ: ರೂ.44.40 ಕೋಟಿ ರೂ.
5. ಕಡಕೋಳ ಪಟ್ಟಣ ಪಂಚಾಯಿತಿಗೆ: ರೂ.57.70 ಕೋಟಿ ರೂ.
6. ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಗೆ: ರೂ.34.90 ಕೋಟಿ ರೂ.




# ಕೇಂದ್ರ ಸರ್ಕಾರದ ಅಮೃತ್ ಯೋಜನೆಯಡಿ 29 ಕೋಟಿ ವೆಚ್ಚದಲ್ಲಿ ವಿಜಯನಗರ ಟ್ಯಾಂಕ್ ಮರು ನಿರ್ಮಾಣ

**32.** ವಿಜಯನಗರ ಮೊದಲನೇ ಹಂತದಲ್ಲಿ ಪಶು, ಪ್ರಾಣಿಗಳು ಬಿದ್ದು ನಾರುತ್ತಿದ್ದ ನೀರಿನ ಟ್ಯಾಂಕುಗಳನ್ನು ಅಮೃತ್ ಯೋಜನೆಯಲ್ಲಿ ಹೊಸದಾಗಿ ರೂ.29 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಿದ್ದು, ಸುಮಾರು 4.5 ಕೋಟಿ ಲೀಟರ್ ಸಂಗ್ರಹ ಶಕ್ತಿ ಹೊಂದಿದ್ದು, ನಗರದ ಶೇ.40 ಭಾಗಕ್ಕೆ ನೀರು ಪೂರೈಕೆ ಮಾಡುತ್ತಿದೆ ಹಾಗೂ ಹೊಸ ಪೈಪುಗಳ ಅಳವಡಿಕೆ, ಒಳಚರಂಡಿ ವ್ಯವಸ್ಥೆಗಾಗಿ ರೂ.78 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿ ಮಾಡಲಾಗಿದೆ.



# ಹುಣಸೂರಿನ 49 ಕೆರೆಗಳಿಗೆ ನೀರು ತುಂಬಿಸಲು 85 ಕೋಟಿ ರೂ.

**33.** ಹುಣಸೂರು ತಾಲ್ಲೂಕಿನ ಮರದೂರು ಗ್ರಾಮದ ಬಳಿ ಲಕ್ಷ್ಮಣತೀರ್ಥ ನದಿಯಿಂದ ಬತ್ತಿ ಹೋಗಿರುವ 49 ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಗೆ ಬಸವರಾಜ ಬೊಮ್ಮಾಯಿಯವರ ಸರಕಾರದಿಂದ 85 ಕೋಟಿ ರೂ. ಯೋಜನೆಗೆ ಒಪ್ಪಿಗೆ ಕೊಡಿಸಿದ್ದೇನೆ.




| ಕ್ರ.ಸಂ | ಗ್ರಾಮದ ಹೆಸರು | ಕೆರೆ ಹೆಸರು | ಪ್ರಮಾಣ (MCft) ಗಳಲ್ಲಿ | Feeder Canal Length (In Km) |
|---|---|---|---|---|
| 1 | ರಾಯನಹಳ್ಳಿ | ರಾಯನಹಳ್ಳಿ ಕೆರೆ | 11.88 | 1.36 |
| 2 | ಬಿಳಿಗನಹಳ್ಳಿ | ಗುರುಗಳ ಕೆರೆ | 3.20 | 0.36 |
| 3 | ಬನ್ನಿಕುಪ್ಪೆ | ಹೊಂಗಿಕೆರೆ | 7.99 | 0.41 |
| 4 | ಬನ್ನಿಕುಪ್ಪೆ | ಚೇಡಿಕಟ್ಟೆ | | |
| 5 | ಹೊಸೂರು | ಹೊಸಕೆರೆ | 14.55 | 0.49 |
| 6 | ಬನ್ನಿಕುಪ್ಪೆ | ಹುಲಿಚಿಕ್ಕನ ಕಟ್ಟೆ | 1.52 | 0.70 |
| 7 | ಬನ್ನಿಕುಪ್ಪೆ | ಚಿಪ್ಪರು ಕಟ್ಟೆ | 2.73 | 0.82 |
| 8 | ಬನ್ನಿಕುಪ್ಪೆ | ಬನ್ನಮ್ಮನ ಕೆರೆ | 12.10 | 1.32 |
| 9 | ಮಾದಳ್ಳಿಮಠ | ಮಾದಳ್ಳಿ ಕೆರೆ | 8.68 | 0.55 |
| 10 | ಮಾದಳ್ಳಿಮಠ | ದಾಸನ ಕಟ್ಟೆ | 0.93 | 0.79 |
| 11 | ಮಾದಳ್ಳಿಮಠ | ಮಡಕೆ ಕಟ್ಟೆ | 0.91 | 0.26 |
| 12 | ಹೊಸಪುರ | ಹೊಸಪುರ ಕೆರೆ | 24.39 | 1.07 |
| 13 | ನಾಡಪ್ಪನಹಳ್ಳಿ | ನಾಡಪ್ಪನಹಳ್ಳಿ ಹೊಸಕೆರೆ | 21.78 | 1.53 |
| 14 | ನಾಡಪ್ಪನಹಳ್ಳಿ | ನಾಡಪ್ಪನಹಳ್ಳಿ ಕೆರೆ | 6.34 | 0.12 |
| 15 | ನಾಡಪ್ಪನಹಳ್ಳಿ | ಕರಳಕಟ್ಟೆ | 11.33 | 0.00 |
| 16 | ದೈತನಕೆರೆ ಕಾವಲ್ | ಹೊಂಡಕಟ್ಟೆ | 4.79 | 1.03 |
| 17 | ದೈತನಕೆರೆ ಕಾವಲ್ | ದೈತನಕೆರೆ | 24.62 | 0.09 |
| 18 | ಹಳೇಪುರ | ಹಳೇಪುರ ಕೆರೆ | 9.80 | 1.36 |
| 19 | ತಿಪ್ಪೂರು | ತಿಪ್ಪೂರು ಕೆರೆ | 9.91 | 1.45 |
| 20 | ನಾಗೇನಹಳ್ಳಿ | ಚುಂಚಮುಂಚಿ ಕಟ್ಟೆ | 0.80 | 0.28 |
| 21 | ನಾಗೇನಹಳ್ಳಿ | ರಂಗಪ್ಪಯ್ಯನ ಕೆರೆ | 10.20 | 0.19 |
| 22 | ನಾಗೇನಹಳ್ಳಿ | ಹೊಂಡ ಕಟ್ಟೆ | 0.67 | 0.41 |
| 23 | ನಾಗೇನಹಳ್ಳಿ | ಮಲ್ಲಯ್ಯನ ಕೆರೆ | 2.04 | 0.43 |
| 24 | ಈರನ ದಾಸೀ ಕೊಪ್ಪಲು | ರಾಜೀ ಕಟ್ಟೆ | 0.68 | 0.00 |
| 25 | ನಂಜಮ್ಮನ ಕೊಪ್ಪಲು | ನಂಜಮ್ಮನ ಕೆರೆ | 0.64 | 0.00 |
| 26 | ಚಲ್ಲಹಳ್ಳಿ | ಮಡಕೆ ಕಟ್ಟೆ | 1.05 | 0.85 |
| 27 | ಚಲ್ಲಹಳ್ಳಿ | ಮುಟ್ಟಪ್ಪನ ಕೆರೆ | 0.85 | 0.85 |
| 28 | ಚಲ್ಲಹಳ್ಳಿ | ಹಾರಂ ಕೆರೆ | 1.98 | 0.38 |
| 29 | ತಿಪ್ಪೂರು | ತೋಟದಹೊಸಳ್ಳಿ ಕೆರೆ | 1.81 | 0.66 |
| 30 | ಬೆಂಕಿಪುರ | ಸೊಣ್ಣು ಕಟ್ಟೆ | 2.09 | 1.60 |
| 31 | ಬೆಂಕಿಪುರ | ಅರಾಮು ಕಟ್ಟೆ | 1.52 | 0.37 |
| 32 | ಬೆಂಕಿಪುರ | ಹೊಣ್ಣನ ಕಟ್ಟೆ | 1.22 | 0.04 |
| 33 | ಬೆಂಕಿಪುರ | ಕುಂಬಗಳ್ಳನ ಕೆರೆ | 2.30 | 0.00 |
| 34 | ಬೆಂಕಿಪುರ | ತಿಮ್ಮನ ಕಟ್ಟೆ | | |
| 35 | ಅಣ್ಣರಾಯನಪುರ | ಅಣ್ಣರಾಯನಪುರ ಕೆರೆ | 7.34 | 0.32 |
| 36 | ಹಳ್ಳಕೆರೆ | ಹಳ್ಳಕೆರೆ | 3.82 | 0.49 |
| 37 | ಚಲ್ಲಹಳ್ಳಿ | ಚಿನ್ನಪ್ಪನ ಕಟ್ಟೆ | 0.82 | 1.70 |
| 38 | ಬೆಂಕಿಪುರ | ಉಂಡಮುಂದಿನ ಕೆರೆ | 3.11 | 1.26 |
| 39 | ಗೋಹಳ್ಳಿ | ಬಾವಿ ಕಟ್ಟೆ | 3.92 | 0.80 |
| 40 | ಒಡೆಯರ ಹೊಸಹಳ್ಳಿ | ಹೊಸಹಳ್ಳಿ ಕೆರೆ | 4.66 | 0.12 |
| 41 | ಒಡೆಯರ ಹೊಸಹಳ್ಳಿ | ಕಾಂತಯ್ಯನ ಕೆರೆ | 0.78 | 0.80 |
| 42 | ಒಡೆಯರ ಹೊಸಹಳ್ಳಿ | ಹೆಗ್ಗನಹಳ್ಳಿ ಕೆರೆ | 4.44 | 0.34 |
| 43 | ಗೋಹಳ್ಳಿ | ಗೋಹಳ್ಳಿ ಕೆರೆ | 2.50 | 1.81 |
| 44 | ಶಂಕಹಳ್ಳಿ | ದಾಸನ ಹಟ್ಟ ಕೆರೆ | 3.01 | 0.93 |
| 45 | ಹರದನಹಳ್ಳಿ | ಹರದನಹಳ್ಳಿ ಕೆರೆ | 3.70 | 1.46 |
| 46 | ತೋಟದಹಳ್ಳಿ | ಹೊಸಕೆರೆ | 14.16 | 1.00 |
| 47 | ಕೊತ್ತೇಗಾಲ | ಕೊತ್ತೇಗಾಲ ಕೆರೆ | 23.52 | 0.80 |
| 48 | ಅಸ್ವಾಳು | ಗದಕಕಟ್ಟೆ | 3.05 | 2.88 |
| 49 | ಅಸ್ವಾಳು | ಅಸ್ವಾಳು | 14.16 | 1.31 |
| | | Total= | 298.29 | 35.79 |



# ಮೈಸೂರು ಮತ್ತು ಕೊಡಗಿನ ಮನೆಮನೆಗೆ ಗ್ಯಾಸ್ ಪೈಪ್‌ಲೈನ್

**34.** ಮುಂದಿನ ಎರಡು ವರ್ಷಗಳಲ್ಲಿ ಮೈಸೂರು ನಗರ, ಹುಣಸೂರು ನಗರ, ಪಿರಿಯಾಪಟ್ಟಣ ನಗರ, ಕುಶಾಲನಗರ, ಮಡಿಕೇರಿ, ಸೋಮವಾರಪೇಟೆ ಹಾಗೂ ವಿರಾಜಪೇಟೆ ನಗರಗಳಲ್ಲಿ ಟ್ಯಾಪ್ ತಿರುಗಿಸಿದರೆ ಅಮೃತ್ ಯೋಜನೆಯಿಂದ ಕುಡಿಯುವ ನೀರು ಬರುವುದರ ಜೊತೆಗೆ, ಪೈಪ್ ಮೂಲಕ ಇಷ್ಟೂ ನಗರಗಳಿಗೆ ಅಡುಗೆ ಗ್ಯಾಸ್ ಕೂಡ ಕೊಡಿಸುತ್ತೇನೆ. ಇದಕ್ಕಾಗಿ ಎಜಿ ಆ್ಯಂಡ್ ಪಿ **(AG&P)** ಕಂಪನಿ ಜೊತೆ ಒಪ್ಪಂದ ಮಾಡಿಕೊಂಡಿದ್ದು ಮುಖ್ಯ ಪೈಪ್‌ಲೈನ್ ಅಳವಡಿಸುವ ಕೆಲಸ ನಡೆಯುತ್ತಿದೆ.

# ದೇಶದ ಮೊಟ್ಟಮೊದಲ ಪೋಸ್ಟ್ ಆಫೀಸ್ ಪಾಸ್‌ಪೋರ್ಟ್ ಸೇವಾ ಕೇಂದ್ರ (POPSK) ಮೈಸೂರಿಗೆ

**35.** ದೇಶದ ಮೊಟ್ಟಮೊದಲ ಪೋಸ್ಟ್ ಆಫೀಸ್ ಪಾಸ್‌ಪೋರ್ಟ್ ಸೇವಾ ಕೇಂದ್ರ **(POPSK)** ವನ್ನು ಮೈಸೂರಿನ ಮೇಟಗಳ್ಳಿಯಲ್ಲಿ ತೆರೆದಿದ್ದು, ಇದುವರೆಗೂ ಸುಮಾರು 55 ಸಾವಿರಕ್ಕೂ ಹೆಚ್ಚು ಹೊಸ ಪಾಸ್ ಪೋರ್ಟ್ ವಿತರಣೆ ಮಾಡಲಾಗಿರುತ್ತದೆ ಹಾಗೂ ಹಿರಿಯ ನಾಗರೀಕರಿಗೆ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಹೆಚ್ಚುವರಿಯಾಗಿ ಕೌಂಟರ್‌ಗಳನ್ನು ಸ್ಥಾಪಿಸಲಾಗಿರುತ್ತದೆ.







# ಚಾಮುಂಡಿಬೆಟ್ಟದ ಅಭಿವೃದ್ಧಿಗೆ 45 ಕೋಟಿ ರೂ.

**36.** ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಬರುವ ಭಕ್ತಾದಿಗಳ ಅನುಕೂಲಕ್ಕಾಗಿ ವಿವಿಧ ಮೂಲಭೂತ ಸೌಕರ್ಯ ಗಳನ್ನು ಒದಗಿಸುವ ಅಭಿವೃದ್ಧಿ ಕಾಮಗಾರಿಗಳಿಗಾಗಿ ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದ 'ಪ್ರಸಾದ್' ಯೋಜನೆಯಡಿಯಲ್ಲಿ 45.71 ಕೋಟಿ ರೂ. ಅನುದಾನ ತಂದಿದ್ದೇನೆ. ಕೇಂದ್ರ ಸರ್ಕಾರದ ಪ್ರಸಾದ್ ಯೋಜನೆಯಡಿ ಚಾಮುಂಡಿ ಬೆಟ್ಟವನ್ನು ಆಯ್ಕೆ ಮಾಡಿದಂತಹ ಮಾಜಿ ಸಚಿವ ಸಾ.ರಾ. ಮಹೇಶಣ್ಣ ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ.



# ಪಿರಿಯಾಪಟ್ಟಣದ ಮಸಣಿಕಮ್ಮ ದೇವಸ್ಥಾನದ ಅಭಿವೃದ್ಧಿಗೆ 9.19 ಕೋಟಿ ರೂ.

ಪಿರಿಯಾಪಟ್ಟಣದ ಗ್ರಾಮದೇವತೆಯಾದ ಪ್ರಖ್ಯಾತ ಮಸಣಿಕಮ್ಮ ದೇವಾಲಯದ ಅಭಿವೃದ್ಧಿ ಮಾಡ ಬೇಕೆಂಬುದು ಬಹು ವರ್ಷಗಳ ಕನಸಾಗಿತ್ತು. ಬಸವರಾಜ ಬೊಮ್ಮಾಯಿಯವರ ಸರ್ಕಾರ ಮುಜ ರಾಯಿ ಇಲಾಖೆಯಿಂದ ಸಂಸದರಿಗೆ ನೀಡಿದ 50 ಲಕ್ಷ ರೂ.ಗಳನ್ನು ನಾನು ಸಂಪೂರ್ಣವಾಗಿ ಮಸಣಿಕಮ್ಮ ದೇವಸ್ಥಾನದ ಅಭಿವೃದ್ಧಿಗೆ ನೀಡಿದ್ದೇನೆ. ಜೊತೆಗೆ ಹುಂಡಿಯಲ್ಲಿದ್ದ 4.22 ಕೋಟಿ ಸೇರಿದಂತೆ 9.19 ಕೋಟಿ ರೂ. ವೆಚ್ಚದಲ್ಲಿ ದೇವಸ್ಥಾನದ ಅಭಿವೃದ್ಧಿಗೆ ಬೊಮ್ಮಾಯಿಯವರ ಸರ್ಕಾರದಿಂದ ಅನುಮೋದನೆ ಕೊಡಿಸಿದ್ದೇನೆ.

# ವಸ್ತುಪ್ರದರ್ಶನ ಮೈದಾನ ಅಭಿವೃದ್ಧಿಗೆ 80 ಕೋಟಿ ರೂ.

**37.** ಮೈಸೂರಿನ ಪ್ರಖ್ಯಾತ ವಸ್ತು ಪ್ರದರ್ಶನ ಪ್ರಾಧಿಕಾರದ ಮೈದಾನದ ಅಭಿವೃದ್ಧಿಗೆ 'ಸ್ವದೇಶ್ ದರ್ಶನ' ಯೋಜನೆಯಡಿ ಅನುದಾನ ತಂದಿದ್ದೇನೆ (ಕನಿಷ್ಠ 80 ಕೋಟಿ ರೂ.)







# ಸೀವೇಜ್ ಫಾರ್ಮ್‌ನ ಕಸ ಕ್ಲೀನ್ ಮಾಡಲು 60 ಕೋಟಿ ರೂ.

**38.** ಕಳೆದ ಚುನಾವಣೆ ವೇಳೆ ಮೈಸೂರಿನ ವಿದ್ಯಾರಣ್ಯಪುರದ ಸೀವೇಜ್ ಫಾರಂನಲ್ಲಿರುವ ಸುಮಾರು 7 ಲಕ್ಷ ಟನ್ ಕಸವನ್ನು ತೆಗೆದು ಸ್ವಚ್ಛಗೊಳಿಸುವ ಭರವಸೆಯನ್ನು ನೀಡಿದ್ದೆವು. ನಮ್ಮ ಹೆಮ್ಮೆಯ ಪ್ರಧಾನಿ ಮೋದೀಜಿಯವರ ಸ್ವಚ್ಛ ಭಾರತ್ ಮಿಷನ್ ನಡಿ 60 ಕೋಟಿ ರೂ. ವೆಚ್ಚದಲ್ಲಿ ಕಸ ತೆಗೆಯುವ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಲಾಗುವುದು.



# 39. ಕೇಂದ್ರ ಸರ್ಕಾರದ 15ನೇ ಹಣಕಾಸು ಯೋಜನೆಯಡಿ ಗ್ರಾಮ ಪಂಚಾಯಿತಿಗಳಿಗೆ ಕಸ ವಿಲೇವಾರಿ ವಾಹನ ವಿತರಣೆ

● ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ 17 ಗ್ರಾಮ ಪಂಚಾಯಿತಿಗಳಿಗೆ 17 ಕಸ ವಿಲೇವಾರಿ ಸರಕು ವಾಹನಗಳನ್ನು ವಿತರಣೆ ಮಾಡಲಾಗಿದೆ. ● ಹುಣಸೂರು ತಾಲ್ಲೂಕು ವ್ಯಾಪ್ತಿಗೆ ಒಳಪಡುವ 41 ಗ್ರಾಮ ಪಂಚಾಯಿತಿಗಳಿಗೆ 41 ಕಸ ವಿಲೇವಾರಿ ಸರಕು ವಾಹನಗಳನ್ನು ವಿತರಣೆ ಮಾಡಲಾಗಿದೆ. ● ಪಿರಿಯಾಪಟ್ಟಣ ತಾಲ್ಲೂಕು ವ್ಯಾಪ್ತಿಗೆ ಒಳಪಡುವ 34 ಗ್ರಾಮ ಪಂಚಾಯಿತಿಗಳಿಗೆ 34 ಕಸ ವಿಲೇವಾರಿ ಸರಕು ವಾಹನಗಳನ್ನು ವಿತರಣೆ ಮಾಡಲಾಗಿದೆ. ● ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ್ ಪ್ರೈವೇಟ್ ಲಿಮಿಟೆಡ್ ಅವರ ಸಿ.ಎಸ್.ಆರ್ ಅನುದಾನದಡಿ ಮೈಸೂರು ತಾಲ್ಲೂಕಿನ ನಾಲ್ಕು ಪಟ್ಟಣ ಪಂಚಾಯಿತಿಗಳಿಗೆ ಕಸ ವಿಲೇವಾರಿ ಸರಕು ವಾಹನ ಹಾಗೂ ಒಂದು ಜೆಟ್ಟಿಂಗ್ ಮಿಷನ್ ಮತ್ತು ಹುಣಸೂರು ಹಾಗೂ ಪಿರಿಯಾಪಟ್ಟಣ ತಾಲ್ಲೂಕು ಪಂಚಾಯಿತಿಗೆ ತಲಾ ಒಂದು ಜೆಟ್ಟಿಂಗ್ ಮಿಷನ್ ವಿತರಣೆ ಮಾಡಲಾಗಿರುತ್ತದೆ.





**40.** ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ವಲಯ ಕಛೇರಿ 5ರ CITB ಚೌಲ್ಟ್ರಿ ಪಕ್ಕದಲ್ಲಿರುವ ಆಟದ ಮೈದಾನದಲ್ಲಿ 3.5 ಕೋಟಿ ರೂ. ಅನುದಾನದಡಿ ಸ್ಕೇಟಿಂಗ್ ರಿಂಗ್ ನಿರ್ಮಾಣ.



**41.** ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ದಟ್ಟಗಳ್ಳಿಯಲ್ಲಿನ ಆಟದ ಮೈದಾನದಲ್ಲಿ 1.5 ಕೋಟಿ ರೂ. ಅನುದಾನದಡಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ನಿರ್ಮಾಣ.






**42.** RBI ಮತ್ತು ಇಂಡಿಯನ್ ಆಯಿಲ್ ಕಾರ್ಪೋರೇಷನ್ ಅವರ ಸಿ.ಎಸ್.ಆರ್ ಅನುದಾನದಡಿ ಮೈಸೂರು ಮಹಾನಗರ ಪಾಲಿಕೆ, ಮೈಸೂರು ತಾಲ್ಲೂಕಿನ 4 ಪಟ್ಟಣ ಪಂಚಾಯಿತಿಗಳಿಗೆ 4 ಕಸ ವಿಲೇವಾರಿ ಸರಕು ವಾಹನ, 3 ಜೆಟ್ಟಿಂಗ್ ಮಷಿನ್ ಹಾಗೂ ಮೈಸೂರು ನಗರ ಪಾಲಿಕೆ ಮತ್ತು ಕೊಡುಗು ವ್ಯಾಪ್ತಿಗೆ ಒಳಪಡುವ 33 ವಿವಿಧ ಬಡಾವಣೆಗಳಲ್ಲಿ ತಲಾ 10.00 ಲಕ್ಷ ರೂ.ಗಳ ಅನುದಾನದಡಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ.

**43.** ಮೈಸೂರು ಜಿಲ್ಲಾಧಿಕಾರಿ ಕಚೇರಿ ನಿರ್ಮಾಣಕ್ಕೆ ನಗರದ ಪ್ರಮುಖ ಭಾಗಗಳಲ್ಲಿರುವ ಕೇಂದ್ರ ಸರ್ಕಾರದ ಜರ್ಮನ್ ಪ್ರೆಸ್‌ಗೆ ಸೇರಿದ 100 ಎಕರೆಯಲ್ಲಿ 15 ಎಕರೆ ಮಂಜೂರು ಮಾಡಿಸಲಾಗಿರುತ್ತದೆ.



# 89.5 ಕೋಟಿಯಲ್ಲಿ ಕೆ.ಆರ್.ಆಸ್ಪತ್ರೆ ನವೀಕರಣ

**44.** ಚಾಮರಾಜ ಕ್ಷೇತ್ರದ ಶಾಸಕರಾಗಿದ್ದ ಎಲ್. ನಾಗೇಂದ್ರ ಅಣ್ಣ ಅವರ ಸಹಕಾರದಿಂದ ಶಿಥಿಲಾವಸ್ಥೆಯಲ್ಲಿರುವ ಪ್ರತಿಷ್ಠಿತ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ವ್ಯಾಪ್ತಿಗೆ ಒಳಪಡುವ ಕೆ.ಆರ್.ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಹಾಗೂ ಪಿ.ಕೆ.ಟಿ.ಬಿ ಆಸ್ಪತ್ರೆಗಳನ್ನು 89.5 ಕೋಟಿ ರೂ. ಗಳಲ್ಲಿ ನವೀಕರಣ ಮಾಡಲಾಗುತ್ತಿದೆ.



# ಮೈಸೂರಿಗೆ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ

**45.** ಮೈಸೂರಿಗೆ ಸುಸಜ್ಜಿತ ಕ್ಯಾನ್ಸರ್ ಆಸ್ಪತ್ರೆ ತರಬೇಕೆಂಬ ನಮ್ಮ ಕನಸ್ಸಿಗೆ ಆಸರೆಯಾದವರು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಮತ್ತು ಬಸವರಾಜ್ ಬೊಮ್ಮಾಯಿಯವರು. ಮಾಜಿ ಶಾಸಕರಾದ ನಾಗೇಂದ್ರ ಅಣ್ಣ ಮತ್ತು ನನ್ನ ಮನವಿಗೆ ಒಗೊಟ್ಟು ಯಡಿಯೂರಪ್ಪನವರು ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣದ ಘೋಷಣೆ ಮಾಡಿದರೆ, ಬೊಮ್ಮಾಯಿಯವರು ಬಜೆಟ್‌ನಲ್ಲಿ 50 ಕೋಟಿ ರೂ. ನೀಡಿದರು. ಫಲವಾಗಿ ಕ್ಯಾನ್ಸರ್ ರೋಗಿಗಳ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಎಸ್ ರಸ್ತೆಯಲ್ಲಿರುವ ಪಿ.ಕೆ.ಟಿ.ಬಿ ಆಸ್ಪತ್ರೆಯ ಆವರಣದಲ್ಲಿರುವ ಸುಮಾರು 7 ಎಕರೆ ಜಾಗದಲ್ಲಿ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯ ಕಟ್ಟಡ ನಿರ್ಮಾಣ ಕಾರ್ಯ ಆರಂಭವಾಗಿದೆ.




**46.** ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯ ಸಂಶೋಧನಾ ಘಟಕ ನಿರ್ಮಾಣ ಮಾಡಲು ಮೈಸೂರು ತಾಲ್ಲೂಕು ಇಲವಾಲ ಹೋಬಳಿ ದಡದಕಲ್ಲಹಳ್ಳಿ ಗ್ರಾಮದ ಸರ್ವೆ ನಂಬರ್ 125ರಲ್ಲಿ 18 ಎಕರೆ ಜಮೀನನ್ನು ಸರ್ಕಾರದಿಂದ ಮಂಜೂರು ಮಾಡಿಸಿ, ಸದರಿ ಉದ್ದೇಶಕ್ಕೆ ಕಾಯ್ದಿರಿಸಲಾಗಿದೆ.

**47.** ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವ್ಯಾಪ್ತಿಯ ಆವರಣದಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ 2.50 ಕೋಟಿ ರೂ. ಅನುದಾನದಡಿ ಸ್ಕಿಲ್ ಲ್ಯಾಬ್ ತೆರೆಯಲಾಗಿರುತ್ತದೆ.

**48.** ಸಾಂಕ್ರಾಮಿಕ ರೋಗಗಳನ್ನು ನಿರ್ವಹಿಸುವ ನಿಟ್ಟಿನಲ್ಲಿ ಮೈಸೂರು ನಗರದ ಕೆ.ಆರ್. ಆಸ್ಪತ್ರೆಯಲ್ಲಿ (ಜಿಲ್ಲಾ ಆಸ್ಪತ್ರೆ) ಕೇಂದ್ರ ಸರ್ಕಾರದ ಸಂಪೂರ್ಣ ಅನುದಾನದಲ್ಲಿ ವೈರಲ್ ರೀಸರ್ಚ್ ಮತ್ತು ಡಯಾಗ್ನಾಸ್ಟಿಕ್ ಲ್ಯಾಬೊರೇಟರಿಯನ್ನು (VRDL) ಮತ್ತು ನ್ಯಾಷನಲ್ ಹೆಲ್ತ್ ಮಿಷನ್‌ನಡಿ (NHM) 9.5 ಕೋಟಿ ರೂ. ಅನುದಾನದಲ್ಲಿ ಸುಸಜ್ಜಿತ MRI ಮಷಿನ್ ಅಳವಡಿಸಲಾಗಿದೆ.





**49.** ಮೈಸೂರು ಮೆಡಿಕಲ್ ಕಾಲೇಜು ವ್ಯಾಪ್ತಿಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ (ಕೇಂದ್ರ 60% ಹಾಗೂ ರಾಜ್ಯ 40%) ಸುಮಾರು 127 ಕೋಟಿ ರೂ. ಅನುದಾನದಡಿ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಸಂಸ್ಥೆಯ ಆವರಣದಲ್ಲಿ ಉಪನ್ಯಾಸ ಕೊಠಡಿ ಹಾಗೂ ಪರೀಕ್ಷಾ ಕೊಠಡಿಗಳನ್ನೊಳಗೊಂಡಂತೆ ಗ್ರಂಥಾಲಯ ಕಟ್ಟಡ ನಿರ್ಮಾಣ, ಗ್ರಂಥಾಲಯ ಇಂಟಿರಿಯರ್ ಹಾಗೂ ಉಪಕರಣಗಳ ಖರೀದಿಗಾಗಿ : 50.00 ಕೋಟಿ ರೂ. ಪುರುಷರ ಹಾಗೂ ಮಹಿಳೆಯರ ಪ್ರತ್ಯೇಕ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ : 77.00 ಕೋಟಿ ರೂ.





**50.** ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವ್ಯಾಪ್ತಿಯ ಆವರಣದಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ಸುಟ್ಟ ಗಾಯಗಳ ತಡೆಗಟ್ಟುವಿಕೆ ಮತ್ತು ನಿರ್ವಹಣೆಗಾಗಿ ರಾಷ್ಟ್ರೀಯ ಕಾರ್ಯಕ್ರಮದಡಿ (NPPMBI) 6.58 ಕೋಟಿ ರೂ. ಅನುದಾನದಡಿ ಮಾನವಸಂಪನ್ಮೂಲ, ಉಪಕರಣ ಹಾಗೂ ಕಟ್ಟಣ ನಿರ್ಮಾಣದ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.





# ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಾಗಿ ಕೊಡಗು ಜಿಲ್ಲಾಸ್ಪತ್ರೆ, ಕ್ರಿಟಿಕಲ್ ಕೇರ್ ಸೆಂಟರ್‌ಗೆ ಮೋದಿ ಸರ್ಕಾರದಿಂದ 16.63 ಕೋಟಿ

**51.** ಕೊಡಗಿಗೆ ಒಂದು ಅತ್ಯುತ್ತಮ ಆಸ್ಪತ್ರೆ ಬೇಕೆಂಬ ಕೂಗಿಗೆ ಧ್ವನಿಯಾದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು 100 ಕೋಟಿ ಅನುದಾನ ನೀಡಿದ್ದರ ಪರಿಣಾಮ ಮಡಿಕೇರಿ ಜಿಲ್ಲಾಸ್ಪತ್ರೆಯನ್ನು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಜತೆಗೆ ಆ ಆಸ್ಪತ್ರೆಯಲ್ಲಿ ಕ್ರಿಟಿಕಲ್ ಕೇರ್ ಸೆಂಟರ್ ಸ್ಥಾಪಿಸಲು ಪ್ರಧಾನಿ ಮೋದೀಜಿ ಸರ್ಕಾರದಿಂದ 16.63 ಕೋಟಿ ಹಾಗೂ ಬೊಮ್ಮಾಯಿಯವರ ಸರ್ಕಾರದಿಂದ 13.22 ಕೋಟಿ, ಆಂದರೆ ಒಟ್ಟು 29.85 ಕೋಟಿ ರೂ. ಅನುದಾನವನ್ನು ತರಲಾಗಿದ್ದು, ಕಾಮಗಾರಿ ನಡೆಯುತ್ತಿದೆ.






## ಮೈಸೂರಿಗೆ CGHS ಆಸ್ಪತ್ರೆ

**52.** ಈ ಭಾಗದ ಜನರ ಬಹುದಿನಗಳ ಕನಸ್ಸಾಗಿದ್ದ **CGHS** ಆಸ್ಪತ್ರೆಯನ್ನು ಮೈಸೂರಿಗೆ ತಂದಿದ್ದೇನೆ. ಮೈಸೂರು, ಕೊಡಗು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಯಲ್ಲಿ ಸುಮಾರು 70 ಸಾವಿರ ಕೇಂದ್ರ ಸರ್ಕಾರದ ನಿವೃತ್ತ ಉದ್ಯೋಗಿಗಳ ಅನುಕೂಲಕ್ಕಾಗಿ ದೇಶದ 77ನೇ **CGHS** ಆಸ್ಪತ್ರೆಯನ್ನು ಮೈಸೂರು ನಗರದ ಶಿಕ್ಷಕರ ಬಡಾವಣೆಯಲ್ಲಿ ಸ್ಥಾಪನೆ ಮಾಡಿದ್ದೇವೆ.

- 72ಕ್ಕೂ ಹೆಚ್ಚು ಪ್ರಧಾನ ಮಂತ್ರಿ ಜನ್ ಔಷಧ ಕೇಂದ್ರಗಳು ಮೈಸೂರು-ಕೊಡಗು ಜಿಲ್ಲೆಗೆ ದೊರೆತಿವೆ.

## STPI ಮೈಸೂರಿಗೆ

**53.** ಇನ್ಫೋಸಿಸ್ ಬಳಿ 27.64 ಕೋಟಿ ರೂ.ರಲ್ಲಿ 'ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ' ನಿರ್ಮಾಣ ಮಾಡಲಾಗಿದೆ. 2.36 ಎಕರೆ ಜಾಗದಲ್ಲಿರುವ ಈ ಕಟ್ಟಡವು 40 ಸಾವಿರ ಚದರ ಅಡಿ ವಿಸ್ಥಾರವಾಗಿದ್ದು, ಅದರಲ್ಲಿ 100 ಸೀಟಿನ ಇನ್‌ಕ್ಯುಬೇಶನ್ ಸೆಂಟರ್ ಕೂಡಾ ಇದೆ.






# 155 ಕೋಟಿ ರೂ.ನಲ್ಲಿ ಸ್ಪೀಚ್ ಆ್ಯಂಡ್ ಹಿಯರಿಂಗ್ ಸಂಸ್ಥೆಯ ಉನ್ನತೀಕರಣ

**54.** ಮೈಸೂರಿನ ಸುಪ್ರಸಿದ್ದ 'ಆಲ್ ಇಂಡಿಯಾ ಸ್ಪೀಚ್ ಆ್ಯಂಡ್ ಹಿಯರಿಂಗ್' (AIISH) ಅಥವಾ ವಾಕ್ ಶ್ರವಣ ಸಂಸ್ಥೆಯನ್ನು 155 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಿ ಪ್ರಧಾನಿ ಮೋದೀಜಿಯವರಿಂದ 2022, ಜೂನ್ 20ರಂದು ಉದ್ಘಾಟನೆ ಮಾಡಿಸಲಾಯಿತು ಹಾಗೂ ಸುಮಾರು 10 ಕೋಟಿ ರೂ. ವೆಚ್ಚದ ವಿಶ್ವದಲ್ಲೇ ಮೊದಲ ವಿಶಿಷ್ಟ ವಾಸ್ತುಶಿಲ್ಪ ವಿನ್ಯಾಸದ ವಾಕ್, ಶ್ರವಣ ಜಾಗೃತಿಗೆ 7 ಅಂತಸ್ತಿನ ಕಟ್ಟಡದ ಮ್ಯೂಸಿಯಂ ಕೂಡ ಮುಕ್ತಾಯ ಹಂತದಲ್ಲಿದೆ.





# ಮೈಸೂರು, ಹುಣಸೂರಿಗೆ ತಾಯಿ ಮತ್ತು ಮಗುವಿನ ಆಸ್ಪತ್ರೆ (MCH)

**55.** ರಾಷ್ಟ್ರೀಯ ಹೆಲ್ತ್ ಮಿಷನ್ ಕಾರ್ಯಕ್ರಮದಡಿ ಕೃಷ್ಣರಾಜ ಕ್ಷೇತ್ರದ ಚಾಮುಂಡಿಪುರಂನ ತುಳಸಿದಾಸ್ ಆಸ್ಪತ್ರೆ ಆವರಣದಲ್ಲಿ 20 ಕೋಟಿ ರೂ. ವೆಚ್ಚದಲ್ಲಿ 200 ಹಾಸಿಗೆಯ ತಾಯಿ ಮತ್ತು ಮಗುವಿನ ಆಸ್ಪತ್ರೆ ನಿರ್ಮಾಣ ಮಾಡಲಾಗಿದ್ದು ಹಾಗೂ ಹುಣಸೂರು ಟೌನ್‌ನಲ್ಲಿ 18 ಕೋಟಿ ರೂ. ಮೊತ್ತದಡಿ ಆಸ್ಪತ್ರೆ ನಿರ್ಮಾಣ ಮಾಡಲು ಸ್ಥಳಕ್ಕಾಗಿ ಕಾಯಲಾಗುತ್ತಿದೆ.




# ಚಾಮುಂಡೇಶ್ವರಿ ಮೆಗಾ ಸಿಲ್ಕ್ ಕ್ಲಸ್ಟರ್

**56.** ಕೇಂದ್ರ ಸರ್ಕಾರದ ಸಹಯೋಗದಲ್ಲಿ ಸಿಪಿಸಿಡಿಎಸ್ (ಸಮಗ್ರ ಪವರ್‌ಲೂಮ್ ಕ್ಲಸ್ಟರ್ ಅಭಿವೃದ್ಧಿ ಯೋಜನೆ) ಕಾರ್ಯಕ್ರಮದಡಿ ಮೈಸೂರು ತಾಲ್ಲೂಕು ಇಲವಾಲ ಹೋಬಳಿಯ ಬೆಳವಾಡಿ ಗ್ರಾಮದ ಹೊರವಲಯದ ಒಟ್ಟು 10 ಎಕರೆ 12 ಗುಂಟೆ ಪ್ರದೇಶದಲ್ಲಿ ಚಾಮುಂಡೇಶ್ವರಿ ಮೆಗಾ ಸಿಲ್ಕ್ ಕ್ಲಸ್ಟರ್ (ಎಸ್.ಪಿ.ವಿ) ಸುಮಾರು 75.76 ಕೋಟಿ ರೂ. ವೆಚ್ಚದಲ್ಲಿ ಸ್ಥಾಪನೆಗೊಳ್ಳುತ್ತಿದೆ.






# ಮೈಸೂರು ಪಿಂಜರಾಪೋಲ್ ಸೊಸೈಟಿಯಲ್ಲಿ ಮೂಲಭೂತ ಸೌಕರ್ಯಗಳಿಗೆ ರಾಜ್ಯ ಸರ್ಕಾರದಿಂದ 3.23 ಕೋಟಿ ರೂ.ಗಳ ಅನುದಾನ



**57.** ಮೈಸೂರು ಪಿಂಜರಾ ಪೋಲ್ ಸೊಸೈಟಿಯು ಕಳೆದ 75 ವರ್ಷಗಳಿಂದ ನಿರಂತರವಾಗಿ ದನ ಕರುಗಳನ್ನು ಪಾಲನೆ ಪೋಷಣೆ ಮಾಡುತ್ತಿದ್ದು, ಪ್ರಸ್ತುತ ಸುಮಾರು 4000ಕ್ಕೂ ಹೆಚ್ಚು ಜಾನುವಾರುಗಳನ್ನು ಪಾಲನೆ ಮಾಡುತ್ತಿದ್ದಾರೆ ಹಾಗೂ ಇದರಲ್ಲಿ ಸುಮಾರು 1200ಕ್ಕೂ ಹೆಚ್ಚು ಜಾನುವಾರುಗಳನ್ನು ಕಸಾಯಿ ಖಾನೆಯಿಂದ ಪೊಲೀಸರು ರಕ್ಷಿಸಿ ನ್ಯಾಯಾಲಯದ ಆದೇಶದ ಮೇರೆಗೆ ಇಲ್ಲಿಗೆ ನೀಡಿರುತ್ತಾರೆ. ಸದರಿ ಜಾನುವಾರುಗಳ ಪಾಲನೆ ಪೋಷಣೆಗಾಗಿ ಬೊಮ್ಮಾಯಿಯವರ ಸರ್ಕಾರದಿಂದ 3.23 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಿಸಿಕೊಟ್ಟಿದ್ದೇವೆ.

## ಕೊಡಗಿಗೆ 63 BSNL ಟವರ್

**58.** ಭಾರತ ಸರ್ಕಾರದ 4ಜಿ ಸ್ಯಾಚುರೇಷನ್ ಯೋಜನೆಯಡಿ ಕೊಡಗು ಜಿಲ್ಲೆಯಲ್ಲಿ ದೂರ ಸಂಪರ್ಕ ಜಾಲವಿಲ್ಲದ ಗ್ರಾಮಗಳಿಗೆ 64 ಹೊಸ **BSNL** ಟವರ್‌ಗಳನ್ನು ಮಂಜೂರು ಮಾಡಿಸಿದ್ದು ಹಾಗೂ ಕಾಮಗಾರಿ ನಡೆಯುತ್ತಿದೆ.





# ‘ತಳವಾರ’ ಮತ್ತು ‘ಪರಿವಾರ’ಕ್ಕೆ ಪರಿಹಾರ

**59.** ‘ಪರಿವಾರ’ ಮತ್ತು ‘ತಳವಾರ’ ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ (ST) ಸೇರ್ಪಡೆ ಮಾಡಬೇಕೆಂಬ 36 ವರ್ಷಗಳ ಹೋರಾಟಕ್ಕೆ ಪ್ರಧಾನಿ ನರೇಂದ್ರ ಮೋದೀಜಿಯವರ ಮೂಲಕ ಜಯ ತಂದುಕೊಟ್ಟಿದ್ದೇವೆ. ನಮ್ಮ ಹಳೆಯ ಮೈಸೂರು ಭಾಗದಲ್ಲಿ ‘ಪರಿವಾರ’ ಹಾಗೂ ಉತ್ತರ ಕರ್ನಾಟಕದಲ್ಲಿ ‘ತಳವಾರ’ ಜನಾಂಗದವರು 10 ಲಕ್ಷಕ್ಕೂ ಹೆಚ್ಚಿದ್ದಾರೆ. ನಾಯ್ಕ್, ನಾಯಕ, ಬೇಡ, ವಾಲ್ಮೀಕಿಯಂತೆಯೇ ಪರಿವಾರ ತಳವಾರವೂ ಸಮಾನಾರ್ಥಕ ಪದವಾಗಿದ್ದರೂ ಪರಿಶಿಷ್ಟ ಪಂಗಡಕ್ಕೆ ಸೇರಿಲ್ಲವೆಂಬ ಕಾರಣಕ್ಕೆ ಸಾವಿರಾರು ಜನ ಉದ್ಯೋಗ ವಂಚಿತರಾಗಿದ್ದರು, ಉದ್ಯೋಗದಿಂದ ವಜಾಗೊಂಡಿದ್ದರು. 36 ವರ್ಷಗಳ ಅವರ ಕೂಗಿಗೆ ಮೋದೀಜಿ ಸರ್ಕಾರ ಸ್ಪಂದಿಸಿ ಪರಿವಾರ, ತಳವಾರವೂ ಪರಿಶಿಷ್ಟ ಪಂಗಡಕ್ಕೆ ಸೇರಿದೆ ಎಂದು ಷರತ್ತುಬದ್ಧ ಕ್ಯಾಬಿನೆಟ್ ನಿರ್ಧಾರ ಕೈಗೊಳ್ಳುವ ಪ್ರಯತ್ನದಲ್ಲಿ ನಾನೂ ಭಾಗಿಯಾಗಿದ್ದೆ. 8 ಸಚಿವಾಲಯಗಳ ಅನುಮತಿ ಪಡೆದು ಅಂತಿಮ ಕ್ಯಾಬಿನೆಟ್ ನಿರ್ಧಾರ ಕೈಗೊಳ್ಳುವಂತೆ ಮಾಡಿ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮಸೂದೆ ಮಂಡಿಸುವಂತೆ ಮಾಡುವಲ್ಲಿ ನಾನು ಏಕಾಂಗಿ ಹೋರಾಟ ಆರಂಭಿಸಿದಾಗ ಪ್ರಲ್ಹಾದ ಜೋಶಿ ಸರ್, BL ಸಂತೋಷ್‌ಜಿ, ಸದಾನಂದ ಗೌಡರು ಮತ್ತು ಅಪ್ಪಣ್ಣ, ಮಾಜಿ ಎಂಎಲ್‌ಸಿ ಸಿದ್ದರಾಜು ಬೆನ್ನೆಲುಬಾಗಿ ನಿಂತರು ಹಾಗೂ 36 ವರ್ಷಗಳ ಹೋರಾಟಕ್ಕೆ ನ್ಯಾಯವನ್ನೂ ತಂದುಕೊಟ್ಟೆವು.



ತಳವಾರ, ಪರಿವಾರ ಸಮುದಾಯ ಎಸ್‌ಟಿಗೆ: ಕೇಂದ್ರ ಸಂಪುಟ ಅಸ್ತು

ಕೇಂದ್ರಕ್ಕೆ ಬಿಎಸ್‌ವೈ ಧನ್ಯವಾದ



Cabinet approves inclusion of ‘Parivara,’ ‘Talawara’ in ST list

NEW DELHI
The Union Cabinet on Wednesday gave its approval to the inclusion of two communities in Karnataka in the the list of STs in Karnataka.
It will fulfil a long-term demand of the Parivara and Talawara communities for Scheduled Tribe status in for ST certificate and benefits meant for STs in the state which goes to polls in May.
The Karnataka govern- had recommended for inclusion of "Parivara' and Talawara' communities as synonyms of 'Nayaka' appearing at Sl No 38 in the list territory is by a notified Order of the President, after consultation with the State Government / UT concerned. Any subsequent inclusion in or ex-

# ಹೊಗೆಸೊಪ್ಪಿಗೆ ದಾಖಲೆಯ ಬೆಲೆ, ಅನಧಿಕೃತ ಬೆಳೆಗಾರರಿಗೆ ಕಮಿಷನ್ ರದ್ದು

**60.** ಹೊಗೆಸೊಪ್ಪು ಮೈಸೂರಿನ ಪಿರಿಯಾಪಟ್ಟಣ, ಹುಣಸೂರು ತಾಲೂಕುಗಳ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು ರೈತರು ತಮ್ಮ ಜೀವನೋಪಾಯಕ್ಕೆ ತಂಬಾಕು ಬೆಳೆಯನ್ನೇ ಅವಲಂಬಿಸಿದ್ದಾರೆ. ಈ ವರ್ಷ ತಂಬಾಕು ಬೆಳೆಗೆ ದಾಖಲೆಯ 250 ರೂ. ಸರಾಸರಿ ಬೆಲೆ ದೊರೆಯುತ್ತಿದೆ. ಕಳೆದ ವರ್ಷ ಹವಾಮಾನ ವೈಪರೀತ್ಯದಿಂದ 60 Mkg ತಂಬಾಕು ಬೆಳೆಯಲು ಸಾಧ್ಯವಾಯಿತು. ಆಗ ಸಂಸದ ಪ್ರತಾಪ್ ಸಿಂಹ ವಾಣಿಜ್ಯ ಮಂತ್ರಿಗಳೊಂದಿಗೆ ಮಾತನಾಡಿ ಅಧಿಕೃತ ತಂಬಾಕು ಬೆಳೆಗಾರರ ಹೆಚ್ಚಿನ ತಂಬಾಕು ಬೆಳೆಗೆ ಮತ್ತು ಅನಧಿಕೃತ ಬೆಳೆಗಾರರು ಬೆಳೆದ ತಂಬಾಕು ಬೆಳೆಗೆ ವಿಧಿಸುತ್ತಿದ್ದ ದಂಡ ಮತ್ತು ಕಮಿಷನ್ನನ್ನು ರದ್ದು ಮಾಡಿಸಿ ಯಾವುದೇ ಶುಲ್ಕ ಮತ್ತು ದಂಡವಿಲ್ಲದೆ ಮಾರಾಟ ಮಾಡಲು ಅವಕಾಶ ಮಾಡಿಕೊಟ್ಟರು. ಇದಕ್ಕಿಂತ ಮೊದಲು ಅನಧಿಕೃತ ರೈತರು ಉತ್ಪಾದಿಸಿದ ತಂಬಾಕಿಗೆ ಮಾರಾಟದ ವೆಚ್ಚದ 15% ಕಮೀಷನ್ ಮತ್ತು ಕೆಜಿಗೆ 2 ಪೆನಾಲ್ಟಿ ವಿಧಿಸುತ್ತಿದ್ದರು.





# ವಿಶ್ವ ಯೋಗದಿನಕ್ಕೆ ಮೈಸೂರಿಗೆ ಬಂದ ಮೋದೀಜಿ

**61.** 2015ರಲ್ಲಿ ಆರಂಭವಾದ ವಿಶ್ವಯೋಗ ದಿನದಂದು ದೇಶದ ಒಂದಿಲ್ಲೊಂದು ಭಾಗದಲ್ಲಿ ಪ್ರಧಾನಿ ಮೋದೀಜಿಯವರು ಸ್ವತಃ ಭಾಗಿಯಾಗುತ್ತಾರೆ. ಜೂನ್ ತಿಂಗಳಲ್ಲಿ ದಕ್ಷಿಣ ಭಾರತದಲ್ಲಿ ಮುಂಗಾರು ಮಳೆಯಿರುವ ಕಾರಣಕ್ಕೆ ಮೋದೀಜಿಯವರು 2015 ರಿಂದ 2022ರವರೆಗೂ ದಕ್ಷಿಣದ ಯಾವುದೇ ರಾಜ್ಯಗಳಲ್ಲೂ ಯೋಗದಿನದ ಕಾರ್ಯಕ್ರಮಗಳಲ್ಲಿ ಭಾಗಿಯಾಗಿರಲಿಲ್ಲ. ಅದರೆ ಅವರನ್ನು ಕರೆತರಬೇಕೆಂಬ 4 ವರ್ಷಗಳ ನನ್ನ ಪ್ರಯತ್ನಕ್ಕೆ ಕಡೆಗೂ ಫಲ ಸಿಕ್ಕಿ 2022, ಜೂನ್ 21 ರಂದು ಮೈಸೂರು ಅರಮನೆ ಎದುರು ಮೋದೀಜಿ ವಿಶ್ವಯೋಗ ದಿನದ ಕಾರ್ಯಕ್ರಮದಲ್ಲಿ ಭಾಗಿಯಾಗಿ ನಮ್ಮ ಕನಸು ಈಡೇರಿಸಿದರು.






# ಮೈಸೂರಿಗೆ ಬರಲಿದೆ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ

**62.** ಮೈಸೂರಿಗೆ ಒಂದು ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ತರಬೇಕೆಂಬ ಕನಸು ನನ್ನದು. ಸಾತಗಳ್ಳಿ ಬಳಿ ಇರುವ 19 ಎಕರೆ ಮೂಡಾ ಜಾಗದಲ್ಲಿ ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಕಾಡೆಮಿಯವರಿಂದ (KSCA) ಸ್ಟೇಡಿಯಂ ತರಲು ಪ್ರಯತ್ನಿಸಿದೆ. ಆದರೆ ಆ ಜಾಗದ ಮಧ್ಯದಲ್ಲಿ ನಿರ್ಜೀವ ಕೆರೆಯಿದ್ದು, ಸುಪ್ರೀಂಕೋರ್ಟ್ ಆದೇಶದಂತೆ ಕೆರೆಯನ್ನು ಬೇರೆಡೆಗೆ ಸ್ಥಳಾಂತರಿಸಲು ಸಾಧ್ಯವಿಲ್ಲದ ಕಾರಣ ಹುಯಿಲಾಳು ಬಳಿ 26 ಎಕರೆ ಜಮೀನನ್ನು ಗುರುತಿಸಿ ಡಿಸಿ, ಆರ್.ಸಿ.(ರೀಜನಲ್ ಕಮೀಷನರ್) ಒಪ್ಪಿಗೆಯೊಂದಿಗೆ ಕಡತವನ್ನು ಕಂದಾಯ ಇಲಾಖೆ ಕಾರ್ಯದರ್ಶಿಗೆ ಕಳುಹಿಸಲಾಗಿದ್ದು, ಸರ್ಕಾರದ ಅನುಮತಿ ದೊರೆತ ಕೂಡಲೇ ಸರಿಸುಮಾರು 100 ಕೋಟಿ ವೆಚ್ಚದಲ್ಲಿ ವಿಶ್ವದರ್ಜೆಯ ಕ್ರಿಕೆಟ್ ಸ್ಟೇಡಿಯಂ ಅನ್ನು ನಿರ್ಮಾಣ ಮಾಡಲಾಗುವುದು.


(ಸಾಂದರ್ಭಿಕ ಚಿತ್ರ)



(ಸಾಂದರ್ಭಿಕ ಚಿತ್ರ, ಸೂರತ್ OPPR)

## ಮೈಸೂರಿಗೆ ಪೆರಿಫೆರಲ್ ರಿಂಗ್ ರೋಡ್

**63.** ಮೈಸೂರು ವೇಗವಾಗಿ ಬೆಳೆಯುತ್ತಿರುವ ನಗರವಾಗಿದ್ದು ಮುಂದೊಂದು ದಿನ ಅದು ಮತ್ತೊಂದು ಬೆಂಗಳೂರು ಆಗಬಾರದು ಎಂದು ಈಗಲೇ ನಾವು ಕಾರ್ಯಪ್ರವೃತ್ತರಾಗಿದ್ದು 2022, ಜೂನ್ ನಲ್ಲಿ ಮೈಸೂರಿಗೆ ಬಂದಿದ್ದ ಕೇಂದ್ರ ಸಚಿವ ನಿತಿನ್ ಗಡ್ಕರಿಯವರನ್ನು ನಾನು, ಆಗಿನ ಮುಡಾ ಅಧ್ಯಕ್ಷರಾಗಿದ್ದ ಎಚ್.ವಿ. ರಾಜೀವ ಮತ್ತು ಕಮಿಷನರ್ ದಿನೇಶ್ ಭೇಟಿಯಾಗಿದ್ದೆವು. ಗಡ್ಕರಿಯವರ ಸಲಹೆಯಂತೆ ಡಿಪಿಆರ್(ಡಿಟೈಲ್ಡ್ ಪ್ರಾಜೆಕ್ಟ್ ರಿಪೋರ್ಟ್) ತಯಾರಿಸಲು ಬಸವರಾಜ್ ಬೊಮ್ಮಾಯಿಯವರ ಸರಕಾರವಿದ್ದಾಗಲೇ ನಗರಾಭಿವೃದ್ಧಿ ಖಾತೆ ಸಚಿವರಾಗಿದ್ದ ಭೈರತಿ ಬಸವರಾಜ್ ಮನವೊಲಿಸಿ 10 ಕೋಟಿ ರೂ. ಬಿಡುಗಡೆ ಮಾಡಿಸಿದ್ದೇವೆ. ನನ್ನ 3ನೇ ಟರ್ಮ್‌ನಲ್ಲಿ ಪೆರಿಫೆರಲ್ ರಿಂಗ್ ಯೋಜನೆಯನ್ನು ಕಾರ್ಯಗತಗೊಳಿಸುತ್ತೇನೆ.

## ಮೈಸೂರಿಗೆ ತರುವೆನು ಮೆಟ್ರೋ

**64.** ಪ್ರಧಾನಿ ಮೋದಿಯವರು, 2023 ಅಕ್ಟೋಬರ್‌ನಲ್ಲಿ ನೋಯ್ಡಾ, ಗಾಝಿಯಾಬಾದ್, ಲಕ್ನೋ, ಕಾನ್ಪುರ, ಮೀರಠ್, ಆಗ್ರಾ ಮುಂತಾದ ಉತ್ತರಪ್ರದೇಶದ ನಗರಗಳಂತೆ ಬೆಳೆಯುತ್ತಿರುವ ಮೈಸೂರಿಗೂ ಮೆಟ್ರೋ ಸೇವೆ ಒದಗಿಸುವ ಸುಳಿವು ನೀಡಿದ್ದು, 3ನೇ ಟರ್ಮ್‌ನಲ್ಲಿ ಮೈಸೂರಿಗೆ ಮೆಟ್ರೋ ತರುವ ಪ್ರಯತ್ನ ಮಾಡುತ್ತೇನೆ.



(ಸಾಂದರ್ಭಿಕ ಚಿತ್ರ)





**2014ರಲ್ಲಿ ನಾನು ಮೊದಲ ಬಾರಿಗೆ ಸಂಸದನಾದಾಗಿನಿಂದ ಇದುವರೆಗೂ ಅಂದರೆ 16 ಮತ್ತು 17ನೇ ಲೋಕಸಭೆ ಎರಡರಲ್ಲೂ ಸಂಸದರ ಕ್ಷೇತ್ರಾಭಿವೃದ್ಧಿ ನಿಧಿ ಬಳಕೆಯಲ್ಲಿ ಕರ್ನಾಟಕದಲ್ಲಿ ನಾನೇ ನಂಬರ್-1**



# ಎಂಪಿ ಫಂಡ್ ಬಳಕೆಯಲ್ಲಿ ಪ್ರತಾಪ್ ಸಿಂಹ ಫಸ್ಟ್

ಸಂಸದ ಪ್ರತಾಪ್ ಸಿಂಹರಿಂದ ₹11.74 ಕೋಟಿ ವೆಚ್ಚ | ನಿಧಿ ಬಳಕೆಯಲ್ಲಿ ಬಚ್ಚೇಗೌಡ ದ್ವಿತೀಯ, ಸಿದ್ದೇಶ್ವರ ತೃತೀಯ

**ಶೂನ್ಯ ಸಾಧಕ ಜಾಧವ್**

## ಗಾದಿ ಮೇಲೆ ಮೋದಿ
## ದೇಶಕ್ಕೆ ಪ್ರಗತಿಯ ಹಾದಿ



## ಮೈಸೂರಿನಿಂದ ಮೋದೀಜಿವರೆಗೆ,
## ಮೋದೀಜಿಯಿಂದ ಅಯೋಧ್ಯೆಗೆ







